ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಅಕ್ಟೋಬರ್ -೨೦೧೫ ಸಂಚಿಕೆ - ೩

ಗಾಂಧಿಯವರನ್ನು ನಮ್ಮವರನ್ನಾಗಿ ಮಾಡಿಕೊಳ್ಳುವುದು ಹೇಗೆ?

*

ಅ - ಸರ್ಕಾರಿ ಖಾದಿ ಪ್ರಭಾವಕಾರಿ!

*

ಬರಗಾಲ ಮತ್ತು ಚರಕ

*

ರೈತ ಬಾಂಧವರಿಗೆ ಅಮ್ಮನ ಸಾಂತನ

*

ಮಹಾತ್ಮ ಗಾಂಧೀಜಿ: ಆತ್ಮಶಕ್ತಿಯ ಅಚಲ ಹಿಮಾಚಲ

ಜನಪದ ವಿಚಾರದಲ್ಲಿ

ಅಕ್ಟೋಬರ್ – ೨೦೧೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೫
ಸಂಪುಟ - ೧೬
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email : janapada@yahoo.com
Web: janapada.org

ಗಾಂಧೀ ಎಂಬ ಮಾಯಾದೀಪ

ಒಂದು ಹಿಡಿ ಮಾಂಸ ಒಂದೆರಡು ಔನ್ಸ್ ರಕ್ತ
ಬೊಚ್ಚು ಬಾಯಲ್ಲಿ ಬ್ರಹ್ಮಾಂಡ
ತುಂಡು ಉಡುಗೆಯ ಅರೆ ಬೆತ್ತಲ ಫಕೀರ
ಕೈಯಲ್ಲೊಂದು ಮಂತ್ರದಂಡ
ಒಮ್ಮೊಮ್ಮೆ ಬರಿಗಾಲಿನ ಬಂಟ ಜಗದೇಕ ವೀರ
ನಮ್ಮ ರಾಷ್ಟ್ರಪಿತ
ಮಕ್ಕಳು ಬಿಕ್ಕಳಿಸಿ ಹರಸಿದ ಕಣ್ಣೀರ ಧಾರೆ
ಕಡಲು ಸೇರಿ ಉಪ್ಪಾಗಿ
ಹಿಡಿ ಉಪ್ಪು ಗಾಂಧೀಜಿಯ
ಕೈಸೇರಿ ನೈತಿಕ ಸಿಟ್ಟಿನಲಿ
ಹರಳುಗಟ್ಟಿ ಕ್ರಾಂತಿ ಮಾಡಿ
ಬ್ರಿಟಿಷರ ಬೆಚ್ಚಿ ಬೀಳಿಸಿತು
ಸಂಸಾರದ ವ್ಯಾಮೋಹ ತೊರೆದಿದ್ದಕ್ಕೆ
ಗಾಂಧಿ ರಾಷ್ಟ್ರಪಿತನಾದರು
ಗಾಂಧಿ ನೂತದ್ದ
ಖಾದಿ ಖದೀಮರ ಕಿಸೆ ಸೇರಿ
ಗಾಂಧೀ ಟೋಪಿ
ಹಲವು ಅಯೋಗ್ಯರ ಅಹಂಕಾರವಾಗಿ
ಗೆದ್ದಲು ಹತ್ತಿದ ತತ್ವಗಳು
ಅಹಿಂಸೆ ಮೇಲೆ ಹಿಂಸೆ ಸವಾರಿ
ಸಹನೆ ಮೇಲೆ ಅಸಹನೆಯ ತಾಂಡವ ನೃತ್ಯ
ಅಟ್ಟಹಾಸದಿ, ಅಟ್ಟಾಡಿಸುತ್ತಾ ಅಣಕಿಸಿದವು.
ಗಾಂಧಿ ನಿಷೇಧಿಸಿದ್ದ ಅಸ್ಪೃಶ್ಯತೆ,
ಸೇಂದಿ-ಸಾರಾಯಿಗಳು
ಬಡ ಬಗ್ಗರ ತಣಿಸುತ್ತಾ, ಮಣಿಸುತ್ತಾ
ಕೆಂಪುಹಾಸಿನ ಮೇಲೆ
ನೃತ್ಯೋತ್ಸವ ನಿತ್ಯ ನಿತ್ಯೋತ್ಸವ!
ದಿನ ದಿನವೂ ಗಾಂಧಿ ಕೊಲೆಯಾಗುತ್ತಿದ್ದಾರೆ.
ಮೆಲ್ಲಗೆ ಬೇಡುತ್ತಿರುವೆ
ಗಾಂಧಿ ಎಂಬ ಸಾವಿಲ್ಲದ ಸುಗಂಧದ ಒಳಗಣ್ಣ
ಬೆಳಕ ಕುಡಿ ಬೆಳಗುತ್ತಿರಲಿ ಅನವರತ.

-ಮೀನಾ ಮೈಸೂರು, ಸಾಭಾರ ಕಸ್ತೂರಿ

ಚಿಂತನೆಗೊಂದು ಸಂಗತಿ

ಈಗ ನಮ್ಮೆಲ್ಲರ ಮುಂದೆ ಇರುವ ಪ್ರಶ್ನೆ: ಅಭಿವೃದ್ಧಿ ಬೇಕೆ ಅಥವಾ ಪರಿಸರ ಬೇಕೆ. ಈ ಪ್ರಶ್ನೆ ಜಟಿಲವಾಗಿರುವಂತೆ ತೋರುತ್ತಿದ್ದರು ಆತ್ಮಾವಲೋಕನಮಾಡಿಕೊಂಡರೆ ಈ ಪ್ರಶ್ನೆಗೆ ಉತ್ತರ ಸಿಗುವುದು ಸುಲಭ. ಅಭಿವೃದ್ಧಿ ಎಂಬುದರ ನಿಜವಾದ ಅರ್ಥ ಪರಿಸರದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಲೇ ಬಡತನ, ನಿರುದ್ಯೋಗ, ಅನಾರೋಗ್ಯ ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆ ಮಾಡುವುದೇ ಆಗಿದೆ. ಒಂದು ಇನ್ನೊಂದಕ್ಕೆ ಮಾರಕವಾಗದೆ ಪೂರಕವಾಗಿರುವಂತೆ ನೋಡಿಕೊಳ್ಳುವ ಜಾಣ್ಮೆಯೆ ದೇಶದ ರಾಜಕಾರಣಿಗಳಿಗೆ ಮತ್ತು ನೀತಿ ನಿರೂಪಕರಿಗೆ ಬೇಕಾಗಿದೆ. ಆದರೆ ಕೇಂದ್ರ ಸರ್ಕಾರದ ಇತ್ತೀಚೆಗಿನ ಧೋರಣೆಯನ್ನು ಗಮನಿಸಿದಾಗ ಗಾಬರಿ ಉಂಟಾಗುವ ಸಂಗತಿ ಗೊತ್ತಾಗುತ್ತದೆ. ಇದುವರೆಗೆ ಪರಿಸರ ರಕ್ಷಣೆಗಾಗಿ ಇದ್ದ ಅನೇಕ ಶಾಸನಗಳಲ್ಲಿ ಬದಲಾವಣೆಯನ್ನು ಮಾಡಲಾಗುತ್ತಿದೆ. ಈ ಬದಲಾವಣೆಯಿಂದಾಗಿ ದೇಶದಲ್ಲಿರುವ ಅರಣ್ಯ ಪ್ರದೇಶ ವೇಗವಾಗಿ ಕುಂಠಿತವಾಗುತ್ತಿದೆ. ಅರಣ್ಯಪ್ರದೇಶದಲ್ಲಿ ಅಣೆಕಟ್ಟೆಗಳನ್ನು ಕಟ್ಟಲಾಗುತ್ತಿದೆ. ಹೊಸಹೊಸ ಗಣಿಗಾರಿಕೆಗಳಿಗೆ ಅವಕಾಶವನ್ನು ಕೊಡಲಾಗುತ್ತಿದೆ. ಅದರಿಂದಾಗಿ ಅತಿ ವೇಗದಲ್ಲಿ ಅರಣ್ಯದಲ್ಲಿ ಕೈಗಾರಿಕೀಕರಣವಾಗುತ್ತಿದೆ. ೨೦೧೫ರ ಬಜೆಟ್ಟಿನಲ್ಲಿ ಪರಿಸರಕ್ಕೆ ಸಂಬಂಧಿಸಿದ ಇಲಾಖೆಯ ಅನುದಾನದಲ್ಲಿ ೨೫%ರಷ್ಟು ಖೋತಾಮಾಡಲಾಗಿದೆ. ಹುಲಿಯ ರಕ್ಷಣೆಗಾಗಿದ್ದ ಅನುದಾನದಲ್ಲಿ ೧೫%ರಷ್ಟು ಖೋತಾಮಾಡಲಾಗಿದೆ. ಅಂತರರಾಷ್ಟ್ರೀಯ ವಾಣಿಜ್ಯ ಸಭೆಯಲ್ಲಿ ಪ್ರಧಾನಮಂತ್ರಿಯವರು ಭಾರತವನ್ನು ಬಂಡವಾಳಹೂಡಿಕೆಯ ವಿಷಯದಲ್ಲಿ ಅತ್ಯಂತ ಸುಲಭಸಾಧ್ಯ ಸ್ಥಳವನ್ನು ಮಾಡುವುದಾಗಿ ಘೋಷಿಸಿದ್ದಾರೆ. ಆದ್ದರಿಂದ ಪರಿಸರಕ್ಕೆ ಸಂಬಂಧಿಸಿದಂತೆ ಇರುವಂಥ ನಿಯಮಾವಳಿಗಳನ್ನು ತ್ವರಿತವಾಗಿ ಸರ್ಕಾರ ಬದಲಾಯಿಸುತ್ತಿದೆ. ಪರಿಸರ ಮಂತ್ರಿ ಪ್ರಕಾಶ್ ಜಾವಡೇಕರ್ ತಮ್ಮ ಗುರಿ "ವಿನಾಶರಹಿತ ಅಭಿವೃದ್ಧಿ" ಎಂದು ಹೇಳುತ್ತಾರಾದರೂ ಅವರು ಕೈಗೊಳ್ಳುತ್ತಿರುವ ನೀತಿ ನಿರ್ಧಾರಗಳೆಲ್ಲವೂ ತದ್ವಿರುದ್ಧವಾಗಿದೆ. ಈಗ ಅರಣ್ಯ ಪ್ರದೇಶಗಳಲ್ಲಿ ಹೆದ್ದಾರಿಗಳ ನಿರ್ಮಾಣ, ರೈಲು ಮಾರ್ಗಗಳ ನಿರ್ಮಾಣ, ಈ ಮುಂತಾದ ಯೋಜನೆಗಳಿಂದಾಗಿ ಕಾಡುಗಳಿಗೆ ಮತ್ತು ಭೂಪ್ರದೇಶಕ್ಕೆ ವ್ಯಾಪಕವಾದ ಹಾನಿಉಂಟಾಗುತ್ತದೆ. ಉದಾಹರಣೆಗೆ ನದಿಗಳ ದಿಕ್ಕು ಬದಲಾವಣೆಯ ಯೋಜನೆಯಿಂದಾಗಿ ಪನ್ನಾ ಹುಲಿ ರಕ್ಷಣಾಯೋಜನೆಯ ಮುಕ್ಕಾಲುಭಾಗ ಮುಳುಗಡೆಯಾಗುತ್ತದೆ. ಇದೇ ರೀತಿಯಾದ ಹಲವಾರು ಅಭಿವೃದ್ಧಿ ಯೋಜನೆಗಳಿಂದ ದೇಶದಲ್ಲಿಯ ಹುಲಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ.

ಗಾಂಧಿಯವರನ್ನು ನಮ್ಮವರನ್ನಾಗಿ ಮಾಡಿಕೊಳ್ಳುವುದು ಹೇಗೆ?

– ಸುರೇಂದ್ರ ಕೌಲಗಿ

'ಮಹಾತ್ಮ' ಮತ್ತು 'ರಾಷ್ಟ್ರಪಿತ' ಎಂದು ಯಾರನ್ನು ನಾವು ಭಾರತೀಯರೆಲ್ಲರೂ ಅಭಿಮಾನದಿಂದ ಕರೆಯುತ್ತೇವೆಯೊ ಅವರನ್ನು ನಮ್ಮವರನ್ನಾಗಿ ಮಾಡಿಕೊಳ್ಳುವ ಬಗೆ ಹೇಗೆ ಎಂಬ ವಿಚಾರ ನನ್ನನ್ನು ಸದಾಕಾಲ ಕಾಡುತ್ತಿರುತ್ತದೆ. ಏಕೆಂದರೆ ನಮ್ಮ ರಾಜಕೀಯ ನಾಯಕರು, ಅರ್ಥಶಾಸ್ತ್ರಜ್ಞರು ಮತ್ತು ವಿದ್ಯಾರ್ಥಿಗಳಾದಿಯಾಗಿ ಎಲ್ಲರು ಗಾಂಧಿಯವರ ಹೆಸರನ್ನು ತಮ್ಮ ವಿಚಾರದ ಪುಷ್ಟಿಗಾಗಿ ಗಾಂಧಿಯವರ ಮಾತನ್ನು ಹೇಳುತ್ತಲೇ ಇರುತ್ತಾರೆ. ಗಾಂಧಿಯವರನ್ನು ಕುರಿತು ಸಾಹಿತಿಗಳು ಕವಿತೆಯನ್ನು ಬರೆಯುತ್ತಲೇ ಇರುತ್ತಾರೆ. ಪತ್ರಿಕೆಗಳಲ್ಲಿಯ ಅಂಕಣಕಾರರು ಗಾಂಧಿಯವರ ಮಾತನ್ನು ಉಪಯೋಗಿಸಿಕೊಳ್ಳದೆ ಇರುವುದಿಲ್ಲ. ರಾಷ್ಟ್ರಮಟ್ಟದಲ್ಲಿ ಹೀಗೆ ಗಾಂಧಿಯ ಹೆಸರನ್ನು ವರ್ಷವಿಡೀ ಜ್ಞಾಪಿಸಿಕೊಳ್ಳುತ್ತಿರುವಾಗ, ಜಾಗತಿಕ ಮಟ್ಟದಲ್ಲಿಯೂ ಗಾಂಧಿಯವರ ಹೆಸರನ್ನು ಸಭೆ ಸಮಾರಂಭಗಳಲ್ಲಿ ಬಳಸಲಾಗುತ್ತದೆ. ವಿಶ್ವರಾಷ್ಟ್ರಸಂಸ್ಥೆ ಅಕ್ಟೋಬರ್ ಎರಡು ಗಾಂಧಿಯವರ ಜನ್ಮದಿನವನ್ನು, ಅಹಿಂಸಾ ದಿನವನ್ನಾಗಿ ಆಚರಿಸಲು ತೀರ್ಮಾನಿಸಿದೆ. ದೇಶ ವಿದೇಶಗಳಲ್ಲಿ ಗಾಂಧಿಯವರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ದೇಶದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳಿವೆ; ಗಾಂಧಿಭವನಗಳಿವೆ. ಈ ರೀತಿಯಾಗಿ ಗಾಂಧಿ ಭೌತಿಕವಾಗಿ, ವೈಚಾರಿಕವಾಗಿ ಮತ್ತು ಸೈದ್ಧಾಂತಿಕವಾಗಿ ಸರ್ವಾಂತರ್‌ಯಾಮಿಯೇ ಆಗಿರುವಾಗ ಅವರು ನಮ್ಮವರೇಕೆ ಆಗಿಲ್ಲ ಎಂಬ ಪ್ರಶ್ನೆ ಕಾಡುವುದು ಸಹಜ. ಗಾಂಧಿಯವರು ಹೇಳಿದ ಮುಖ್ಯಮಾತುಗಳಾದ ಸತ್ಯ ಮತ್ತು ಅಹಿಂಸೆ ನಮ್ಮ ಜೀವನದಲ್ಲಿ ಇಲ್ಲದಿರುವುದು ನಮಗೆ ಗೊತ್ತಾಗುತ್ತ ಇರುತ್ತದೆ. ಗಾಂಧಿ ಪ್ರತಿಪಾದಿಸಿದ್ದ ಆ ಎರಡು ಮುಖ್ಯ ತತ್ವಗಳನ್ನು ನಮ್ಮ ಜೀವನದ ವ್ಯವಹಾರಗಳಲ್ಲಿ ಅಳವಡಿಸಿಕೊಂಡಿಲ್ಲ. ವ್ಯವಹಾರವನ್ನು ಅವುಗಳಿಂದ ದೂರವಿಟ್ಟಷ್ಟು ವ್ಯವಹಾರ ಚೆನ್ನಾಗಿ ಕುದುರುವುದೆಂದು ಭಾವಿಸಿದ್ದೇವೆ. ಈ ಮಾತು ಯಾವುದೇ ಕ್ಷೇತ್ರದ ವ್ಯವಹಾರವಿರಲಿ ಅದಕ್ಕೆ ಅನ್ವಯಿಸುತ್ತದೆ. ಎಲ್ಲರ ಜೀವನ ವ್ಯವಹಾರಗಳಲ್ಲಿ ಸತ್ಯ-ಅಹಿಂಸ ತತ್ವಗಳು ಇದ್ದಿದ್ದರೆ ದೇಶದಲ್ಲಿ ಈಗಿರುವಷ್ಟು ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಹಿಂಸಾಚಾರಗಳು ನಡೆಯುತ್ತಿರಲಿಲ್ಲ. ಜಾಗತಿಕ ಮಟ್ಟದಲ್ಲಿ ದೇಶ ದೇಶಗಳ ಮಧ್ಯೆ ವೈಮನಸ್ಸು ಮತ್ತು ಘರ್ಷಣೆಗಳು ಇರುತ್ತಿರಲಿಲ್ಲ. ಸತ್ಯ ಮತ್ತು ಅಹಿಂಸಾ ತತ್ವಗಳಲ್ಲದೇ ಗಾಂಧಿಯವರು ಇನ್ನೂ ಒಂಬತ್ತು ಬಗೆಯ ವಿಚಾರಗಳನ್ನು

ಹೇಳಿದ್ದಾರೆ. ಅವು ಕಳ್ಳತನಮಾಡದಿರುವುದು, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಸರ್ವಧರ್ಮ ಸಮಾನತೆ, ಸರ್ವತ್ರಭಯ ವರ್ಜನೆ, ಈ ಹನ್ನೊಂದು ಪ್ರಕಾರದ ತತ್ವಗಳನ್ನು ಗಾಂಧಿಯವರು ತಮ್ಮ ಜೀವನದಲ್ಲಿ ಪಾಲಿಸಿದ್ದರು. ಆ ವ್ರತಗಳ ಪಾಲನೆಯ ಮಹಿಮೆಯಿಂದಲೇ ಮೋಹನದಾಸ್ ಎಂಬ ಸಾಮಾನ್ಯ ಬಾಲಕ ರಾಷ್ಟ್ರಪಿತನಾದ ಮತ್ತು ಮಹಾತ್ಮನಾದ. ಗಾಂಧಿಯವರು ನಮ್ಮವರೇಕೆ ಆಗಿಲ್ಲ ಪ್ರಶ್ನೆಗೆ ನಮಗೆ ಇಲ್ಲಿ ಉತ್ತರ ಸಿಗುತ್ತದೆ. ನಾವು ಅವರು ಹೇಳಿದ ಹನ್ನೊಂದು ವ್ರತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ವಿಫಲರಾಗಿದ್ದೇವೆ. ಆ ವ್ರತಗಳ ಆಚರಣೆಗಾಗಿ ನಾವು ಪ್ರಯತ್ನ ಸಹ ಮಾಡಿಲ್ಲ. ಪ್ರಯೋಗದ ಮಾತಂತೂ ದೂರವೇ ಉಳಿಯಿತು. ಗಾಂಧಿಯವರು ಆ ಎಲ್ಲ ವ್ರತಗಳೊಂದಿಗೆ ಪ್ರಯೋಗಮಾಡಿ ಅವುಗಳ ಸಾಮರ್ಥ್ಯವನ್ನು ತಿಳಿದುಕೊಂಡರು. ಜೀವನ ಸಾರ್ಥಕವಾಗಬೇಕಾದರೆ ಮತ್ತು ಅದು ಸೇವೆಯ ಸಾಧನವಾಗಬೇಕಾದರೆ ಆ ಸಾಮರ್ಥ್ಯವನ್ನು ಪಡೆಯಲು ಆ ಹನ್ನೊಂದು ವ್ರತಗಳ ಪಾಲನೆ ಅಗತ್ಯವೆಂದು ಅವರು ಭಾವಿಸಿದ್ದರು. ತಮ್ಮ ನಲ್ವತ್ತು ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಅವುಗಳನ್ನೆ ಪ್ರಯೋಗಮಾಡಿ ಸತ್ಯಾಗ್ರಹಿಯಾದರು. ಅವರು ಆ ವ್ರತಗಳ ಪ್ರಯೋಗಕ್ಕಾಗಿ ಅನುಕೂಲಕರ ಕಾಲವನ್ನು ಕಾಯಲಿಲ್ಲ. ಪ್ರತಿಕೂಲ ಕಾಲವನ್ನೇ ಪ್ರಯೋಗಗಳಿಗಾಗಿ ಅನುಕೂಲಕರ ಕಾಲವನ್ನಾಗಿ ಪರಿವರ್ತಿಸಿಕೊಂಡರು. ಅಂಥ ಆತ್ಮವಿಶ್ವಾಸವನ್ನು ಅವರುಗಳಿಸಿಕೊಂಡಿದ್ದರು. ಇದಕ್ಕೆ ತದ್ವಿರುದ್ಧವಾದ ಮನೋಭಾವ ನಮ್ಮದಾಗಿದೆ. ಗಾಂಧಿಯವರು ಹೇಳಿದ್ದ ವ್ರತಗಳನ್ನು ಪಾಲಿಸಲು ಕಾಲಕೂಡಿ ಬಂದಿಲ್ಲ. ಅದು ಅನುಕೂಲವಾಗಿರದೆ ಪ್ರತಿಕೂಲವಾಗಿದೆ ಎಂಬ ಭ್ರಮೆಯಲ್ಲಿಯೇ ನಾವು ಇರುತ್ತೇವೆ. ಆದ್ದರಿಂದ ಆ ವ್ರತಗಳ ಪಾಲನೆಯನ್ನು ಪಿಳ್ಳೆ ನೆಪಗಳನ್ನು ಹೇಳುತ್ತಲೇ ಮುಂದೂಡುತ್ತಾ ಹೋಗುತ್ತೇವೆ. ಕೊನೆಗೂ ಅವುಗಳ ಪಾಲನೆಯನ್ನು ಮಾಡುವುದೇ ಇಲ್ಲ. ಗಾಂಧಿಯವರು ನಮ್ಮವರಾಗಬೇಕೆಂಬ ಇಚ್ಛೆ ನಮ್ಮದಾದಲ್ಲಿ ಅವರು ಹೇಳಿದ ವ್ರತಗಳನ್ನು ನಮ್ಮ ಜೀವನದಲ್ಲಿ ಯಥಾಶಕ್ತಿ, ಯಥಾಮತಿ ಅಳವಡಿಸಿಕೊಳ್ಳಲು ಪ್ರಯತ್ನಮಾಡಲೇಬೇಕು. ಅಂಥ ಪ್ರಯತ್ನಗಳಿಂದ ಸಾಧಿತವಾಗುವ ಒಂದು ಸಣ್ಣ ಯಶಸ್ಸು ಇನ್ನೊಂದು ಯಶಸ್ಸಿಗೆ ಮೆಟ್ಟಿಲಾಗುತ್ತದೆ. ಸಣ್ಣ ಯಶಸ್ಸು ದೊಡ್ಡ ಯಶಸ್ಸಿಗೆ ಕಾರಣವಾಗುತ್ತದೆ. ಪ್ರಯತ್ನಮಾಡುವುದು ಮುಖ್ಯವೇ ಹೊರತು ಅನುಕೂಲ ಮತ್ತು ಪ್ರತಿಕೂಲ ಕಾಲಗಳ ಬಗ್ಗೆ ಯೋಚಿಸುತ್ತಾ ಕುಳಿತುಕೊಳ್ಳುವುದು ಮುಖ್ಯವಲ್ಲ. ಮನುಷ್ಯರ ಜೀವನ ದೀರ್ಘವೂ ಅಲ್ಲ, ಶಾಶ್ವತವೂ ಅಲ್ಲ, ಆದ್ದರಿಂದ ಬದುಕಿಗೆ ಅರ್ಥಕೊಡುವ, ಜೀವನಕ್ಕೆ ಸಾಫಲ್ಯತೆ ತಂದುಕೊಡುವ ಹಾಗೂ ಸಮಾಜ ಜೀವನವನ್ನು ಸ್ವಸ್ಥಗೊಳಿಸುವ ಶಕ್ತಿಯುಳ್ಳ ಗಾಂಧಿಯವರು ಹೇಳಿದ ಜೀವನದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಗಾಂಧಿಯವರು ನಮ್ಮವರಾಗುವರು ಮತ್ತು ನಾವು ಗಾಂಧಿಯವರ ಜನರಾಗುವೆವು.

ಅ - ಸರ್ಕಾರಿ ಖಾದಿ ಪ್ರಭಾವಕಾರಿ!

– ಸುರೇಂದ್ರ ಕೌಲಗಿ

(ನನ್ನ ಕೈಯಲ್ಲಿ ಖಾದಿ ಇಡಿ, ನಿಮ್ಮ ಕೈಯಲ್ಲಿ ಸ್ವರಾಜ್ಯ ಇಡುವೆ-ಮಹಾತ್ಮ ಗಾಂಧೀ)

ಖಾದಿ ಜನನ ಗಾಂಧೀಯವರಿಂದ ಆಯಿತು. ಗಾಂಧೀಜಿ ಯಾವತ್ತೂ ಸರ್ಕಾರಪರ ವ್ಯಕ್ತಿಯಾಗಿರಲಿಲ್ಲ. ಶೋಷಿತರ ಮತ್ತು ದುರ್ಬಲರ ಪರವಾಗಿಯೇ ಇದ್ದರು. ಬಡತನ ಮತ್ತು ನಿರುದ್ಯೋಗ ದೇಶವನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಗಳೆಂದು ಅವರು ತಿಳಿದಿದ್ದರು. ಅವುಗಳ ನಿವಾರಣೆಗಾಗಿ ಸರ್ಕಾರದ ಸಹಾಯಬಯಸಲಿಲ್ಲ. ಬದಲಿಗೆ ಜನರಿಂದಲೇ ಸಿದ್ಧವಾಗುವ ಮತ್ತು ಜನರಿಂದಲೇ ಉಪಯೋಗಿಸಲ್ಪಡುವ ಖಾದಿಎಂಬ ಉದ್ಯೋಗ ಸೃಷ್ಟಿಸಿದರು. ಸರ್ಕಾರೇತರ ಪ್ರಯತ್ನದಿಂದ ಪ್ರಾರಂಭವಾದ ಖಾದಿ ಭಾರತವನ್ನು ಬ್ರಿಟೀಷರ ಸಾಮ್ರಾಜ್ಯದಿಂದ ಬಿಡುಗಡೆಮಾಡಲು ಬಲವಾದ ಸಾಧನವಾಯಿತು. ಭಾರತದ ಬಿಡುಗಡೆಯ ನಂತರ ಜಗತ್ತಿನ ಇನ್ನು ಅನೇಕ ದೇಶಗಳು ವಸಾಹತುಶಾಹಿಯಿಂದ ಬಿಡುಗಡೆಗೊಂಡು ಸ್ವತಂತ್ರವಾದವು. ಬೃಹತ್ ಮತ್ತು ಬಲಿಷ್ಠ ಚಕ್ರಾಧಿಪತ್ಯ ಕಿತ್ತೆಸೆಯುವ ಶಕ್ತಿ ಹಾಗೂ ಸಾಮರ್ಥ್ಯ ಖಾದಿಗೆ ಹೇಗೆ ಬಂತು? ದಕ್ಷಿಣಆಫ್ರಿಕಾದಲ್ಲಿ ಹೋರಾಟ ನಡೆಸಿದಕಾಲದಿಂದಲೂ ಆತ್ಮಶಕ್ತಿ ಮತ್ತು ಜನಶಕ್ತಿಯ ಪ್ರಭಾವವನ್ನು ಗಾಂಧೀಜಿ ಮನಗಾಣಿದ್ದರು. ಅಲ್ಲಿ ತಮ್ಮ ಎಲ್ಲ ಹೋರಾಟಗಳನ್ನು ಜನಶಕ್ತಿಯಿಂದಲೇ ನಡೆಸಿದ್ದರು. ಎಲ್ಲ ತ್ಯಾಗಕ್ಕೂ ಸಿದ್ಧರಾಗಿರುವಂಥ ಸ್ವಯಂಸೇವಕರ ಪಡೆಯನ್ನೇ ಸಿದ್ಧಪಡಿಸಿದ್ದರು. ಸ್ವಯಂಸೇವಕರ ಪಡೆಗೆ ಸತ್ಯ ಮತ್ತು ಅಹಿಂಸೆಯ ವಿಷಯದಲ್ಲಿ ಸ್ವಂತ ಪ್ರಯೋಗಗಳ ಮೂಲಕ ಪರಿಚಯಿಸಿಕೊಟ್ಟಿದ್ದರು. ಆದ್ದರಿಂದ ಸ್ವಯಂಸೇವಕರು ತಾವು ಪಾಲ್ಗೊಂಡಿದ್ದ ಹೋರಾಟದಲ್ಲಿ ಆತ್ಮಶಕ್ತಿಯನ್ನು ಆರ್ವಿಭವಿಸಿಕೊಂಡಿದ್ದರು.

ಭಾರತಕ್ಕೆ ಹಿಂದಿರುಗಿದ ಮೇಲೆ ೧೯೧೫ರ ಸುಮಾರಿನಲ್ಲಿ ಸತ್ಯಾಗ್ರಹ ಆಶ್ರಮ ಪ್ರಾರಂಭಿಸಿದರು. ಆಶ್ರಮದ ಸ್ಥಾಪನೆ ಕೂಡ ಜನತೆಯ ಸಹಾಯದಿಂದಲೇ ಆಯಿತು. ಸರ್ಕಾರದ ಕಿಂಚಿತ್ ಸಹಾಯ ಇರಲಿಲ್ಲ. ದೇಶದ ಬಿಡುಗಡೆಗಾಗಿ ಮಹಾನ್ ಹೋರಾಟದ ಮೊದಲ ಹೆಜ್ಜೆಯಾಗಿ ಸತ್ಯಾಗ್ರಹ ಆಶ್ರಮದ ಉದಯವಾಯಿತು. ಚರಕ ಮತ್ತು ಕೈಮಗ್ಗಗಳ ಪ್ರವೇಶ ಆಯಿತು. ನಿಧಾನವಾಗಿ ಖಾದಿಯ ವಿಚಾರ ಪ್ರಚಾರವಾಯಿತು. ಖಾದಿಯ ಕಾರ್ಯದಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಒರಟು ಖಾದಿಯ ಬದಲಾಗಿ ಹೆಚ್ಚು ಗುಣಮಟ್ಟದ ಖಾದಿ ತಯಾರಾಗಲು ಪ್ರಾರಂಭವಾಯಿತು. ಮುಂದೆ ಖಾದಿ ಸ್ವಾತಂತ್ರ್ಯ ಆಂದೋಲನದ ಸೈನಿಕರ

ಸಮವಸ್ತ್ರವಾಯಿತು. ೧೯೪೭ರಲ್ಲಿ ದೇಶ ಸ್ವತಂತ್ರವಾಗಲು ಕಾರಣವಾಯಿತು. ಸ್ವತಂತ್ರ ಭಾರತದ ರಾಷ್ಟ್ರಬಾವುಟ ಖಾದಿಮಯವಾಯಿತು. ಖಾದಿ ಅಲ್ಲದ ಬಾವುಟ ನಿಶೇಧಿಸಲ್ಪಟ್ಟಿತು. ಖಾದಿ ಉತ್ಪಾದನೆಯ ಹಾಗೂ ಸತ್ಯ ಅಹಿಂಸೆಯ ಸಂಕೇತವಾದ ಚಕ್ರ ರಾಷ್ಟ್ರಧ್ವಜದಲ್ಲಿ ಗೌರವಯುತ ಸ್ಥಾನಪಡೆಯಿತು.

ಉದ್ಯೋಗ ಸೃಷ್ಟಿಗೆ ಕಾರಣವಾಗಲೆಂದು ಪ್ರಾರಂಭವಾದ ಖಾದಿಯ ಉತ್ಪಾದನೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವ ಪರಿಣಾಮಕಾರಿಯಾದ ಅಹಿಂಸಾ ಶಕ್ತಿಯಾಗಿ ಪರಿಣಮಿಸಲು ಏನು ಕಾರಣ? ಯಾವುದು ಜನತೆಗೆ ಅಗತ್ಯವೆಂದೆನಿಸುತ್ತದೊ, ಯಾವುದರಲ್ಲಿ ಜನತೆ ಯಾವುದೇ ಫಲಾಪೇಕ್ಷೆಯಿಲ್ಲದೆ ಕೆಲಸಮಾಡುತ್ತದೊ, ಯಾವುದನ್ನು ಮಾಡುವುದರಿಂದ ಆತ್ಮಗೌರವ ಹೆಚ್ಚಾಗುತ್ತದೊ, ಯಾವುದು ರಾಜ್ಯಾಶ್ರಯವನ್ನು ನೆಚ್ಚಿಕೊಂಡಿರುವುದಿಲ್ಲವೊ ಅಂಥ ಕಾರ್ಯ ಬಲವತ್ತರವಾಗಿರುತ್ತದೆ ಮತ್ತು ಪ್ರಭಾವಕಾರಿಯಾಗಿರುತ್ತದೆ. ಅದರ ಪರಿಣಾಮ ಸಧ್ಯದ ಪೀಳಿಗೆಯ ಮೇಲಷ್ಟೇ ಅಲ್ಲದೆ ಮುಂದಿನ ಪೀಳಿಗೆಯ ಮೇಲೂ ಪ್ರಭಾವವನ್ನು ಬೀರುವಂಥದ್ದಾಗಿರುತ್ತದೆ. ಸಮಾಜದ ಅಂತರಂಗ ಮತ್ತು ಬಹಿರಂಗ ಜೀವನದ ಸ್ವರೂಪವನ್ನೇ ಬದಲಾಯಿಸುವಂಥದ್ದಾಗಿರುತ್ತದೆ. ಗಾಂಧೀಜಿ ಪ್ರಾರಂಭಿಸಿದ್ದ ಖಾದಿಕೆಲಸ ಇಂಥ ಗುಣಗಳುಳ್ಳ ಕೆಲಸವಾಗಿತ್ತು. ಆದ್ದರಿಂದಲೇ ಅದರ ಜನನವಾದಾಗಿನಿಂದ ಸ್ವಾತಂತ್ರ್ಯ ಬಂದು ಸರ್ಕಾರದ ತೆಕ್ಕೆಯೊಳಗೆ ಸೇರುವ ವರೆಗೆ ಅಂದರೆ ನಲವತ್ತೆರಡು ವರ್ಷಗಳಷ್ಟು ದೀರ್ಘಕಾಲ ಖಾದಿ ಸರ್ಕಾರಿ ಕ್ಷೇತ್ರದಿಂದ ಹೊರಗೆ ಇದ್ದುಕೊಂಡು ಸ್ವತಂತ್ರ ಭಾರತದ ನಿರ್ಮಾಣದಲ್ಲಿ ಬಹು ದೊಡ್ಡ ಪಾತ್ರವಹಿಸಿತು. ಅಲ್ಲಿಯ ವರೆಗೆ ಖಾದಿ ಅಂದರೆ ಸತ್ಯ, ಅಹಿಂಸೆ, ಸರಳತೆ, ಪಾವಿತ್ರ್ಯ, ಶರೀರಶ್ರಮ, ಅಸಂಗ್ರಹ, ಸ್ವಾವಲಂಬನೆ, ವಿಕೇಂದ್ರೀಕರಣ ಮುಂತಾದ ಜೀವನ ಮೌಲ್ಯಗಳ ಸಂಕೇತವಾಗಿತ್ತು. ಗಾಂಧೀಜಿಯವರು ಅಂಥ ಮೌಲ್ಯಾಧಾರಿತ ಖಾದಿಯನ್ನು ಇಡೀ ದೇಶಕ್ಕೆ ತೊಡಿಸಿ ಭಾರತ ಅದ್ಭುತವಾದ ಅಹಿಂಸಾ ಶಕ್ತಿಯಾಗಿ ಹೊರಹೊಮ್ಮಬೇಕು ಮತ್ತು ಜಗತ್ತನ್ನು ಯುದ್ಧ ರಹಿತವನ್ನಾಗಿಮಾಡಬೇಕು, ಜಗತ್ತಿನೆಲ್ಲೆಡೆಯಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಗೊಳ್ಳಬೇಕೆಂದು ಬಯಸಿದ್ದರು. ಅದಕ್ಕಾಗಿ ಅವರು ಅದರಲ್ಲಿ ಆತ್ಮಶಕ್ತಿಯ ಪ್ರಾಣಪ್ರತಿಷ್ಠಾಪನೆ ಮಾಡಿದ್ದರು.

ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಬದಲಾದ ರಾಜಕೀಯ, ಆರ್ಥಿಕ ಮತ್ತು ಕೈಗಾರಿಕ ನೀತಿಯ ಕಾರಣದಿಂದಾಗಿ ಲೋಕಖಾದಿ ಸರ್ಕಾರಿ ಖಾದಿಯಾಯಿತು. ಸರ್ಕಾರಿ ಖಾದಿಯಾಗುತ್ತ ಬಂದಂತೆ ನಿಧಾನವಾಗಿ ಅದು ಸಂಕೇತಿಸುತ್ತಿದ್ದ ಮೌಲ್ಯಗಳು ಮರೆಯಾಗುತ್ತ ಹೋದವು; ಅದು ಮೊದಲಿದ್ದ ತನ್ನ ಗೌರವವನ್ನು ಕಳೆದುಕೊಳ್ಳುತ್ತ ಬಂತು. ಖಾದಿ ಧರಿಸಿದವರ ಬಗ್ಗೆ ಸಮಾಜ ಅನುಮಾನಗೊಳ್ಳುತ್ತಾ ಬಂತು. ಈ ಮೊದಲೇ ಭ್ರಷ್ಟವಾಗಿದ್ದ ಖಾಕಿ ಮತ್ತು ಕಾವಿ ಬಟ್ಟೆಗಳ ಜೊತೆಗೆ ಖಾದಿಕೂಡ ಸಮೀಕರಣಗೊಳ್ಳಲು ಪ್ರಾರಂಭವಾಯಿತು. ಖಾದಿ ಉದ್ಯಮದಲ್ಲಿ ತೊಡಗಿದ್ದ ಖಾದಿ ಸಂಸ್ಥೆಗಳು ತಮ್ಮ ಗೌರವವನ್ನು ಕಳೆದುಕೊಳ್ಳಲಾರಂಭಿಸಿದವು. ರಿಬೇಟ್‌ಕೊಡುವುದು

ಮತ್ತು ಆ ಹಣವನ್ನು ಸರಕಾರದಿಂದ ಪಡೆಯುವುದು ಈ ವ್ಯವಹಾರದಲ್ಲಿಯೇ ಖಾದಿ ಕೆಲಸಗಾರರು ತಮ್ಮ ಸಮಯ, ಶಕ್ತಿ ಮತ್ತು ಚಿಂತನೆಯನ್ನು ಹರಣ ಮಾಡಿಕೊಳ್ಳಲಾರಂಭಿಸಿದರು. ಕ್ರಮೇಣ ಜನತೆಯು ವಿಶ್ವಾಸವನ್ನೂ ಕಳೆದುಕೊಳ್ಳಲಾರಂಭಿಸಿದವು. ಸಮೂಹ ಖಾದಿ ಉತ್ಪಾದನೆ ಕಡಿಮೆಯಾಗುತ್ತಾ ಬಂತು. ಸ್ವಾವಲಂಬಿಖಾದಿ ಉತ್ಪಾದನೆಯೂ ಕಡಿಮೆಯಾಗುತ್ತಾ ಬಂತು. ಖಾದಿ ಧರಿಸುವವರು ನೂಲಬೇಕು; ನೂಲುವವರು ಖಾದಿ ಧರಿಸಬೇಕು ಎಂಬ ಗಾಂಧೀಜಿ ಹೇಳಿದ್ದ ಸೂತ್ರವನ್ನು ಮರೆಯಲಾಯಿತು. ಖಾದಿಕೇವಲ ಬಟ್ಟೆಯಲ್ಲ; ಅದೊಂದು ವಿಶಿಷ್ಟ ಜೀವನ ಪದ್ಧತಿ ಎಂಬ ತಿಳುವಳಿಕೆ ಅಗ್ರಾಹ್ಯವಾಯಿತು.

೧೯೬೦ರ ದಶಕದಲ್ಲಿ ಜನಪದ ಸೇವಾ ಟ್ರಸ್ಟ್ ಖಾದಿ ಕೆಲಸವನ್ನು ಕೈಗೊಂಡಿತು. ಆಗ ಅದು ಗಾಂಧೀಜಿಯವರು ಪ್ರತಿಪಾದಿಸಿದ್ದ ವಿಚಾರಗಳ ಆಧಾರದ ಮೇಲೆಯೇ ಖಾದಿ ಕಾರ್ಯವನ್ನು ಕೈಗೊಳ್ಳಲು ಬಯಸಿತ್ತು. ಆದರೆ ಪ್ರಾರಂಭದಲ್ಲಿ ಹಣಕಾಸಿನ ಸೌಲಭ್ಯ ಇಲ್ಲದೇ ಇದ್ದುದರಿಂದ ರಾಜ್ಯ ಖಾದಿ ಮಂಡಲಿಯ ಮೂಲಕ ಸರ್ಕಾರ ಕೊಟ್ಟ ಸುಮಾರು ಮೂರು ಲಕ್ಷರೂಪಾಯಿಗಳ ಅನುದಾನ ಪಡೆಯಿತು. ಆದರೆ ಕ್ರಮೇಣ ಮಂಡಲಿಯೊಂದಿಗಿನ ವ್ಯವಹಾರ ಸಮಂಜಸವಿಲ್ಲವೆಂದು ಗೊತ್ತಾದ ಕೂಡಲೇ ಮಂಜೂರಾಗಿದ್ದ ಅನುದಾನವನ್ನು ಮಂಡಲಿಗೆ ಹಿಂದಿರುಗಿಸಿತು. ಆದರೆ ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಲಾಗಿದ್ದ ಖಾದಿ ಕಾರ್ಯವನ್ನು ಟ್ರಸ್ಟ್‌ಮುಂದುವರೆಸಿಕೊಂಡು ಹೋಯಿತು. ಖಾದಿ ಪ್ರಮಾಣಪತ್ರವನ್ನು ಪಡೆಯಿತು. ಆತ್ಮಸ್ಥೈರ್ಯ ಉಂಟಾಗುತ್ತಾ ಹೋದಂತೆ ಖಾದಿ ಮಾರಾಟದ ಮೇಲಿನ ರಿಯಾಯಿತಿ ಹಣವನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿತು. ಯಾವ ಪ್ರಕಾರದ ಅಭಿವೃದ್ಧಿ ಅನುದಾನವನ್ನು ಸಹ ಪಡೆಯದೆ ಟ್ರಸ್ಟ್ ಖಾದಿ ಕೆಲಸವನ್ನು ಮುಂದುವರೆಸಿಕೊಂಡು ಬಂದಿದೆ. ಈಗಲೂ ಸರ್ಕಾರದ ಯಾವ ಸೌಲಭ್ಯವನ್ನೂ ಪಡೆಯದೆ ಖಾದಿ ಉತ್ಪಾದನೆ, ಮಾರಾಟ ಮತ್ತು ಸಿದ್ಧಉಡುಪುಗಳ ತಯಾರಿಕೆ ಇತ್ಯಾದಿ ಖಾದಿ ಚಟುವಟಿಕೆಗಳನ್ನು ಜನಪದ ಸೇವಾ ಟ್ರಸ್ಟ್ ನಿರ್ವಹಿಸಿಕೊಂಡು ಬರುತ್ತಲೇ ಇದೆ. ಹದಿನೈದು ಜನರು ವರ್ಷವಿಡೀ ಖಾದಿ ಉತ್ಪಾದನೆಯಲ್ಲಿ ತೊಡಗಿದ್ದಾರೆ. ಉತ್ಪಾದಿತವಾಗುವ ಎಲ್ಲ ಖಾದಿ ಬಟ್ಟೆಗೆ ಬಹಳ ಬೇಡಿಕೆ ಇದೆ. ಬೇಡಿಕೆ ಇರುವಷ್ಟು ಉತ್ಪಾದನೆಮಾಡಲಾಗುತ್ತಿಲ್ಲ. ಹೆಚ್ಚು ಉತ್ಪಾದನೆಮಾಡಲು ಪ್ರಯತ್ನಿಸಲಾಗುತ್ತಿದೆ. ಟ್ರಸ್ಟ್ ತಯಾರಿಸುತ್ತಿರುವ ಖಾದಿ ಬಟ್ಟೆಗೆ ದೇಶದ ಮತ್ತು ರಾಜ್ಯದ ವಿವಿಧ ಭಾಗಗಳಿಂದಲೂ ಬೇಡಿಕೆ ಇದೆ. ಗ್ರಾಹಕರು ಖಾದಿ ಬಟ್ಟೆಯ ಉತ್ಪಾದನ ಮುಖಬೆಲೆಯನ್ನು ಕೊಟ್ಟು ಖರೀದಿಸುತ್ತಾರೆ. ಯಾವುದೇ ಪ್ರಕಾರದ ರಿಯಾಯಿತಿಯನ್ನು ಕೇಳುವುದಿಲ್ಲ. ಅಷ್ಟೇ ಅಲ್ಲದೆ ಅವರು ಖಾದಿಯ ಮೂಲ ವಿಚಾರ ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ತಮ್ಮ ಆಧುನಿಕ ಜೀವನಶೈಲಿಯಲ್ಲಿ ಮಾರ್ಪಾಟು ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗೆ ಜನಪದ ಸೇವಾ ಟ್ರಸ್ಟಿನ ಅ ಸರ್ಕಾರಿ ಖಾದಿ ಪ್ರಭಾವಕಾರಿಯಾಗಿದೆ. ಇಂಥ ಖಾದಿ ಎಲ್ಲೆಲ್ಲೂ ಬೆಳೆಯಲಿ.

ಬರಗಾಲ ಮತ್ತು ಚರಕ

– ಸುರೇಂದ್ರ ಕೌಲಗಿ

ರಾಜ್ಯದಲ್ಲಿ ಬಂದಿರುವ ಬರಗಾಲದ ನಿರ್ವಹಣೆಯಲ್ಲಿ ಸರ್ಕಾರದ ಪರಿಹಾರಕ್ಕಿಂತಲೂ ಗಾಂಧೀಜಿ ಪ್ರತಿಪಾದಿಸಿದ್ದ ಚರಕ ಹೆಚ್ಚು ಪರಿಣಾಮಕಾರಿ ಮತ್ತು ಶಾಶ್ವತ. ದೇಶದಲ್ಲಿದ್ದ ಮತ್ತು ಇರುವ ಬಡತನದ ನಿರ್ವಹಣೆಗಾಗಿ ಹಾಗು ವರ್ಷದಲ್ಲಿ ಕೆಲವೇ ತಿಂಗಳು ವ್ಯವಸಾಯಮಾಡುವ ರೈತರಿಗೆ ಬಿಡುವಿನ ವೇಳೆಯಲ್ಲಿ ಪರ್ಯಾಯ ಉದ್ಯೋಗಕ್ಕೆ ಮತ್ತು ಹಣ ಸಂಪಾದನೆಗೆ ಪೂರಕವಾಗಲೆಂದೇ ಗಾಂಧೀಜಿ ನೂರು ವರ್ಷಗಳ ಹಿಂದೆ ಚರಕದ ವಿಚಾರ ದೇಶದ ಮುಂದೆ ಇಟ್ಟಿದ್ದರು.

ಚರಕದ ಮೂಲಕ ತಯಾರಾಗುವ ನೂಲಿನಿಂದ ನೇಯ್ಗೆಯಾದ ಖಾದಿಯನ್ನು ಎಲ್ಲರೂ ಧರಿಸಬೇಕೆಂದು ತಿಳಿಸಿದ್ದರು. ಅಂದಿನ ಏಕೈಕ ರಾಷ್ಟ್ರೀಯ ಸಂಘಟನೆಯಾಗಿದ್ದ ಕಾಂಗ್ರೆಸ್‌ಪಕ್ಷ ಚರಕವನ್ನು ಮತ್ತು ಖಾದಿಯನ್ನು ಸ್ವಾತಂತ್ರ್ಯ ಚಳುವಳಿಯ ಅಹಿಂಸಾತ್ಮಕ ಸಾಧನವನ್ನಾಗಿ ಸ್ವೀಕರಿಸುವಂತೆ ಮಾಡಿದ್ದರು. ಗಾಂಧೀ ತನ್ನವರೆಂದೆ ಪ್ರತಿಪಾದಿಸುವ ಕಾಂಗ್ರೆಸ್ ಸರ್ಕಾರ ಗಾಂಧೀಜಿಯವರ ಈ ಕಾರ್ಯಕ್ರಮವನ್ನು ಮರತೇಬಿಟ್ಟಿದೆ! ೧೯೭೪ರಲ್ಲಿ ಜಯಪ್ರಕಾಶ್‌ನಾರಾಯಣರು ದೇಶದಲ್ಲಿದ್ದ ಅಂದಿನ ಕಾಲದ ಎಲ್ಲ ಬಗೆಯ ಸಮಸ್ಯೆಗಳ ನಿವಾರಣೆಗೆ 'ಸಂಪೂರ್ಣಕ್ರಾಂತಿಗಾಗಿ' ಕರೆ ನೀಡಿದ್ದರು; ಗುಜರಾತಿನಲ್ಲಿ ಮೀಸಲಾತಿಗಾಗಿ ನಡೆಯುತ್ತಿರುವ ಪಟೇಲ್ ಜನಾಂಗದ ಚಳುವಳಿ ೧೯೩೦ರಲ್ಲಿ ಗಾಂಧೀಜಿ ಮಾಡಿದ್ದ ದಂಡಿ ಯಾತ್ರೆಯನ್ನು ಮಾಡಹೊರಟಿದೆ; ಒಂದೆರಡು ವರ್ಷಗಳ ಹಿಂದೆ ಅಣ್ಣಾ ಹಜಾರೆ ಭ್ರಷ್ಟಾಚಾರ ನಿರ್ಮೂಲನೆಗೆ ಉಪವಾಸ ಸತ್ಯಾಗ್ರಹ ಕೈಗೊಂಡು ರಾಷ್ಟ್ರವ್ಯಾಪಿ ಚಳುವಳಿಯನ್ನು ಪ್ರಾರಂಭಿಸಿದ್ದರು.

ಹೀಗೆ ಗಾಂಧೀಜಿ ಕೊಟ್ಟಿದ್ದ ವಿಚಾರಗಳ ಮರುಅನುಕರಣೆ ಆಗುತ್ತಿರುವ ಸಂದರ್ಭದಲ್ಲಿ ಗಾಂಧೀಜಿ ಸೂಚಿಸಿದ್ದ ಚರಕದ ಕಾರ್ಯಕ್ರಮವನ್ನು ಜನತೆ ಏಕೆ ಕೈಗೆತ್ತಿಕೊಳ್ಳಬಾರದು? ಸ್ವಾತಂತ್ರ್ಯಪೂರ್ವದಲ್ಲಿ ಬರಗಾಲ ಬಿದ್ದಾಗ ಇಂಗ್ಲೀಷ್ ಸರ್ಕಾರವೂ ಸಂಕಷ್ಟದಲ್ಲಿದ್ದ ಜನರಿಗೆ ಮಾನವೀಯ ದೃಷ್ಟಿಯಿಂದ ಸಹಾಯಮಾಡುತ್ತಿತ್ತು. ಆದರೆ ಜನರಿಗೆ ಆದಾಯ ತಂದುಕೊಡಬಹುದಾದ ಉದ್ಯೋಗವನ್ನು ಮಾತ್ರ ಸೃಷ್ಟಿಸುತ್ತಿರಲಿಲ್ಲ. ಕಷ್ಟದಲ್ಲಿದ್ದ ರೈತರ ಕಂದಾಯವನ್ನು ವಜಾಮಾಡುವಂತೆ ಆಗ್ರಹಿಸಿ ಸರ್ಕಾರದ ವಿರುದ್ಧ ಗಾಂಧೀಜಿ ಸತ್ಯಾಗ್ರಹ ಮಾಡುತ್ತಿದ್ದರು.

ಈಗ ರಾಜ್ಯದಲ್ಲಿ ಅಂಥದೇ ಸ್ಥಿತಿಯುಂಟಾಗಿದೆ. ಬ್ರಿಟಿಷರಿಲ್ಲದ ಬ್ರಿಟೀಷ್ ಸರ್ಕಾರ ನಮ್ಮ ರಾಜ್ಯದಲ್ಲಿ ಇದೆಯೆನೋ ಎಂದು ಭಾಸವಾಗುತ್ತಿದೆ. ಸರ್ಕಾರದ ಆಡಳಿತ

ವೈಖರಿ ಬ್ರಿಟಿಷ್ ಸರ್ಕಾರದ ಆಡಳಿತ ವೈಖರಿಗಿಂತ ಭಿನ್ನವಾಗಿಲ್ಲ. ಅದೇ ತಾತ್ಕಾಲಿಕ ಪರಿಹಾರದ ಚಿಂತನೆ. ಎಲ್ಲರಿಗೂ ವರ್ಷವಿಡೀ ಉದ್ಯೋಗ ಕೊಡದಂಥ, ದೈತ್ಯಾಕಾರದ ಬಂಡವಾಳ ಹೂಡಿಕೆ ಕೇಳುವ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವತ್ತ ಸರ್ಕಾರ ಗಮನ ಕೊಡುತ್ತಿದೆಯೇ ವಿನಃ ವಿಕೇಂದ್ರಿತ, ಕಡಿಮೆ ಬಂಡವಾಳದ, ಮಾನವಶಕ್ತಿಯಾಧಾರಿತ, ಪರಿಸರ ಸ್ನೇಹಿ ಉದ್ಯೋಗಗಳ ಸ್ಥಾಪನೆಯ ಬಗ್ಗೆ ಚಿಂತನೆಯನ್ನೇ ಮಾಡುತ್ತಿಲ್ಲ.

ಜಾಗತಿಕ ಮಟ್ಟದಲ್ಲಿ ಎಲ್ಲರನ್ನೂ ಕಾಡುತ್ತಿರುವುದು ಪರಿಸರ ಹಾನಿಯ ಮತ್ತು ಹವಾಮಾನ ಬದಲಾವಣೆಯ ಸಮಸ್ಯೆ. ಜೀವನ್ಮರಣದ ಈ ಸಮಸ್ಯೆಯನ್ನು ಬಗೆಹರಿಸುವ ಸಾಮರ್ಥ್ಯ ಚರಕಕ್ಕಿದೆ. ಚರಕ ಕೇವಲ ಉತ್ಪಾದನೆಯ ಸಾಧನವಲ್ಲ. ಅದೊಂದು ಸುಸ್ಥಿರ ಜೀವನಪದ್ಧತಿಯ ಹುಡುಕಾಟ. ಪ್ರಕೃತಿಯನ್ನು ಉಳಿಸುವ, ಬೆಳೆಸುವ ಸಾಧನ. ಆದ್ದರಿಂದ ಚರಕದ ಸರ್ವತ್ರ ಉಪಯೋಗಕ್ಕೆ ಜನತೆ ಪ್ರಯತ್ನಿಸಬೇಕು, ಮತ್ತು ಸರ್ಕಾರ ಯೋಜಿಸಬೇಕು. ಬರಗಾಲ ಉಂಟಾಗಲು ಹವಾಮಾನದಲ್ಲಿಯ ವೈಪರೀತ್ಯ ಮೂಲಕಾರಣವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲದೆ ಇಲ್ಲ. ಹವಾಮಾನದಲ್ಲಿಯ ವೈಪರೀತ್ಯಕ್ಕೆ ಅರಣ್ಯಗಳ ಅವ್ಯಾಹತ ನಾಶ, ವಾಹನ ಮತ್ತು ಕೈಗಾರಿಕೆಗಳಿಂದ ಹೊರಹೊಮ್ಮುವ ಮಾಲಿನ್ಯ ಮತ್ತು ಅತಿಯಾದ ನಗರೀಕರಣ ಕಾರಣಗಳೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೂ ಸರ್ಕಾರ ಅಂಥ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವುದು ವಿಶಾದನೀಯ ಮತ್ತು ಖಂಡನೀಯ.

ಗಾಂಧೀಜಿ ಚರಕದ ಪ್ರಚಾರಮಾಡಿದ ಮೇಲೆ ಮತ್ತು ಖಾದಿಧಾರಿ ಸ್ವಯಂಸೇವಕರು ಹತ್ತಾರು ಹೋರಾಟಮಾಡಿದ ನಂತರ ಸುಮಾರು ಇಪ್ಪತ್ತೆಂಟು ವರ್ಷಗಳ ತರುವಾಯ ದೇಶದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಖಾದಿಯನ್ನು "ಭಾರತ ಸ್ವಾತಂತ್ರ್ಯದ ಸಮವಸ್ತ್ರ" ಎಂದು ಕರೆದರು. ಅವರು ಹೇಳಿದ ಆ ಮಾತನ್ನು ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ವಾಸ್ತವವಾಗಿಸಬೇಕಾದುದು ಅಗತ್ಯವಾಗಿದೆ. ಜಾಗತೀಕರಣ ರೈತರಿಗೆ ಮರಣ ಶಾಸನವಾಗಿದೆ. ಸಾಹಿತಿ ಆರ್.ಪೂರ್ಣಿಮಾರವರು ಹೇಳುವಂತೆ ರೈತರ ಆತ್ಮಹತ್ಯೆ ಒಬ್ಬ ರೈತನ ಆರ್ಥಿಕತೆಯ ಕಥೆ ಮಾತ್ರವಲ್ಲ, ಒಂದು ದೇಶದ ಆರ್ಥಿಕತೆಯ ಕಥೆಯನ್ನೂ ಹೇಳುತ್ತದೆ. ನಾವೆಲ್ಲರೂ ರೈತರ ಆತ್ಮಹತ್ಯೆ ತಡೆಯಲು ಏನು ಮಾಡಬಹುದೊ ಅದೆಲ್ಲವನ್ನೂ ಬೇಗ ಮಾಡುವುದು ಉಚಿತ. ಇಲ್ಲದಿದ್ದರೆ ನಮ್ಮ ಅನ್ನದಲ್ಲಿ ನಮ್ಮ ಆತ್ಮಹತ್ಯೆಯವಾಸನೆ ಸೇರುವುದು ಖಚಿತ.

ಯಾವ ರಾಜ್ಯ ಅಂತರರಾಷ್ಟ್ರೀಯ ಉದ್ಯಮಿಗಳನ್ನು ಆಕರ್ಷಿಸಲು ಉತ್ತಮವಾಗಿದೆ ಎಂಬ ಪ್ರಶಸ್ತಿಯನ್ನು ವಿಶ್ವಬ್ಯಾಂಕ್ ಕೊಡುವ ದುಸ್ಥಿತಿಯಿಂದ ಪಾರಾಗಬೇಕಾದರೆ ಚರಕದ ಹಿಂದಿರುವ ಸಿದ್ಧಾಂತವನ್ನು ಅರಿತುಕೊಂಡು ಎಲ್ಲ ಜನರು ಮತ್ತು ಸಂಘಸಂಸ್ಥೆಗಳು ಕೆಲಸಮಾಡಬೇಕು. ದೇಶದ ಎಲ್ಲ ತಾಂತ್ರಿಕ ಶಾಲೆಗಳಲ್ಲಿ ನೂಲುಗಾರಿಕೆ,

ನೇಕಾರಿಕೆ ಕಲಿಸುವ ವ್ಯವಸ್ಥೆ ಮಾಡಬೇಕು. ಬರಗಾಲವೇ ಉಂಟಾಗದಂಥ ಸ್ಥಿತಿಯನ್ನು ಕಾಪಾಡಿಕೊಂಡುಬರುವ ಒಂದು ವಿಶಿಷ್ಟಸಾಧನವಾಗಿದೆ ಚರಕ. ವಿದೇಶಗಳಿಂದ ಬಹುರಾಷ್ಟ್ರೀಯ ಕೈಗಾರಿಕಾಕಂಪನಿಗಳನ್ನು ಆಹ್ವಾನಿಸುತ್ತಿರುವ ಸರ್ಕಾರಗಳು ದೇಶದಲ್ಲಿ ಇನ್ನೂ ಹೆಚ್ಚು ಬರಗಾಲದಸ್ಥಿತಿ ಉಂಟಾಗುವಂತೆ ಮಾಡುತ್ತಿವೆ. ಪ್ರತಿ ವ್ಯಕ್ತಿಯ ಉದ್ಯೋಗಕ್ಕಾಗಿ ತಲಾ ಕೋಟ್ಯಾಂತರ ರೂಪಾಯಿ ಖರ್ಚಾಗುವಂಥ ಹಾಗೂ ಅತಿಯಾದ ಭೂಮಿ ಮತ್ತು ವಿದ್ಯುತ್‌ಚ್ಛಕ್ತಿ ಕೇಳುವಂಥ ಕಾರ್ಖಾನೆಗಳನ್ನು ದೇಶದಲ್ಲಿ ಸ್ಥಾಪಿಸಿ ಅಭಿವೃದ್ಧಿ ಮಾಡುವ ವಿಚಾರ ಸರ್ಕಾರಗಳಿಟ್ಟು ಕೊಂಡಿವೆ. ವಿದೇಶೀ ಕಂಪನಿಗಳಿಗೆ ಅತಿಯಾದ ರಿಯಾಯಿತಿಗಳನ್ನು ಮತ್ತು ಸವಲತ್ತುಗಳನ್ನು ಸರ್ಕಾರಗಳು ಕೊಡುತ್ತಿವೆ. ಇಷ್ಟೆಲ್ಲ ಆದ ಮೇಲೂ ದೇಶದಲ್ಲಿ ಉಂಟಾಗುವ ಬರಗಾಲದ ಸ್ಥಿತಿಯನ್ನು ತಪ್ಪಿಸಲು ಇವುಗಳಿಗೆ ಸಾಧ್ಯವಾಗಿಲ್ಲ; ಜನರ ಬವಣೆತಪ್ಪಿಲ್ಲ. ಸರ್ಕಾರಗಳು ಕೂಡ ಒಂದು ರೀತಿಯ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿವೆ. ಹಣಕಾಸಿನ ಅತಿಯಾದ ಹೊರೆ ಅವುಗಳ ಮೇಲೆ ಬೀಳುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುವ ರಿಯಾಯಿತಿಗಳೊಂದಿಗೆ, ಬರಗಾಲದ ನಿರ್ವಹಣೆಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇಂಥ ಧರ್ಮಸಂಕಟದಿಂದ ಸರ್ಕಾರಗಳು ಪಾರಾಗಬೇಕಿದ್ದರೆ ಸ್ವದೇಶೀ ವಿಚಾರ ಅಂದರೆ ಎಲ್ಲ ವಿಷಯಗಳಲ್ಲಿ ಸ್ವಾವಲಂಬನೆ ಸಾಧಿಸುವ ಕಾರ್ಯಕ್ರಮದ ಅಂಗವಾಗಿರುವ ಚರಕ ಪ್ರತಿಪಾದಿಸುವ ಸಮಾಜವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಪ್ರಯತ್ನಿಸಬೇಕು. "ನನ್ನ ಕೈಗೆ ಖಾದಿ ಕೊಡಿ ನಾನು ನಿಮ್ಮ ಕೈಗೆ ಸ್ವರಾಜ್ಯ ಕೊಡುವೆನು" ಎಂದು ಗಾಂಧೀಜಿ ಹೇಳಿದ ಮಾತನ್ನು ನಿಜ ಮಾಡಲು ಸರ್ಕಾರಗಳು ಪ್ರಯತ್ನಿಸಲಿ. ಚರಕವನ್ನು ತಮ್ಮದಾಗಿಸಿ ಕೊಳ್ಳಲಿ.

ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನ

೨೦೧೫ನೇ ಸಾಲಿನ ಅಖಿಲ ಭಾರತ ೪೭ನೇ ಸರ್ವೋದಯ ಸಮಾಜ ಸಮ್ಮೇಳನ ಈ ಬಾರಿ ದೇಶದ ರಾಜಧಾನಿ ದಿಲ್ಲಿಯಲ್ಲಿ ನಡೆಯಲಿದೆ. ಸಮ್ಮೇಳನವು ನವೆಂಬರ್ ೧ರಿಂದ ೩ನೇ ತಾರೀಕಿನವರೆಗೆ ಹರಿಜನ ಸೇವಕ ಸಂಘ, ಕಿಂಗ್ಸ್ ವೇ ಕ್ಯಾಂಪ್, ದಿಲ್ಲಿ – ೦೯ ಈ ಸ್ಥಳದಲ್ಲಿ ನಡೆಯುವುದು.

ಸಂಪರ್ಕದ ದೂರವಾಣಿ ಸಂಖ್ಯೆ :೦೭೧೫೨ – ೨೮೪೦೬೧,

ಇ–ಮೇಲ್ : sarvasevasangh@yahoo.in.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಸುರೇಂದ್ರಕೌಲಗಿ, ಮೇಲುಕೋಟೆ, ಜಿಲ್ಲಾ ಮಂಡ್ಯ, ದೂರವಾಣಿ:೯೧೪೧೭ ೦೦೮೧೨

ರೈತ ಬಾಂಧವರಿಗೆ ಅಮ್ಮನ ಸಾಂತ್ವನ



ಗಿರಿಜಾ ಕೌಲಗಿ

ಪ್ರಿಯ ರೈತ ಸಹೋದರರೇ, ನೀವು ಯಾಕೆ ಇಷ್ಟು ನಿರಾಶರಾಗುತ್ತಿದ್ದೀರಿ? ನೀವು ಗಡಿಯಲ್ಲಿ ಇರತಕ್ಕ ನಮ್ಮ ಸೈನಿಕರಿಗಿಂತ ಏನು ಕಮ್ಮಿಯಿಲ್ಲ. ಅವರು ಗಡಿಯನ್ನು ಕಾಯ್ದರೆ ನೀವು ಒಳಗೆ ಇರತಕ್ಕ ನಮ್ಮ ಹೊಟ್ಟೆಯನ್ನು ತುಂಬಿಸುತ್ತೀರಿ. ನೀವಿರದಿದ್ದರೆ ನಮ್ಮ ಗತಿ ಏನು. ನೀವೇ ಅನ್ನದಾತರು. ಇತ್ತೀಚೆಗೆ ನಡೆದ ಅನಾಹುತಗಳು ಕಮ್ಮಿ ಏನು? ಅನೇಕ ಜನ ರೈತರು ತಮ್ಮ ಸಂಸಾರದ ಯೋಚನೆಯನ್ನು ಮಾಡದೆ ಆತ್ಮಹತ್ಯೆಮಾಡಿಕೊಂಡರು.

ಸಮಾಜದ ಗಣ್ಯರು, ರಾಜಕಾರಣಿಗಳು, ಬುದ್ಧಿಜೀವಿಗಳು, ಮುಖಂಡರು, ಮಠಾಧಿಪತಿಗಳು, ಸಾಹಿತಿಗಳು, ಚಿಂತಕರು ಮುನ್ನುಗ್ಗಿ ನಿಮ್ಮನ್ನು ಸಂತೈಸಿದರು.

ಕೆಲವರು ಹಣದ ಸಹಾಯಮಾಡಿ ತಮ್ಮ ಚಿತ್ರವನ್ನು ಹತ್ತುಜನದ ಮುಂದೆ ತೆಗೆಸಿಕೊಂಡು ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಪಟ್ಟರು. ಅವರ ಮನೆಗೆ ಹೋಗಿ ಸಾಂತ್ವನ ಹೇಳಿದರು. ಇದೆಲ್ಲ ಎಷ್ಟು ದಿನ, ಸೂತಕ ಕಳೆಯುವವರೆಗೆ ಅಷ್ಟೇ. ಸತ್ತವರೇನು ಎದ್ದು ಬರಲಿಲ್ಲ. ನೀವು ಸ್ವಲ್ಪ ನಿಮ್ಮ ಬೇಸಾಯದ ಪದ್ಧತಿಯನ್ನು ಬದಲಾಯಿಸಿಕೊಂಡಲ್ಲಿ ಯಾವ ಸಮಸ್ಯೆಯೂ ಇಲ್ಲ.

ನಿಮ್ಮ ಹತ್ತಿರ ೧೦ಎಕರೆ ಜಮೀನಿದ್ದರೆ ನಿಮ್ಮ ಮನೆಗೆ ಏನೇನು ಬೇಕು ಅದನ್ನು ಮುಂಚೆ ಯೋಚಿಸಿ ಅದಕ್ಕಾಗಿ ೫ಎಕರೆ ಜಮೀನು ಮೀಸಲಾಗಿಡಿ, ಈಗೇನು ದೊಡ್ಡ ಕುಟುಂಬಗಳಿರುವುದಿಲ್ಲ. ಒಂದು ಸಂಸಾರದಲ್ಲಿ ೫ಜನ ಇದ್ದರೆ ಹೆಚ್ಚು. ಒಬ್ಬೊಬ್ಬರಿಗೆ ಒಂದೊಂದು ಎಕರೆಯಂತೆ ಇಟ್ಟು ಅದರಲ್ಲಿ ನಿಮ್ಮ ಕುಟುಂಬಕ್ಕೆ ಬೇಕಾದ ರಾಗಿ, ಜೋಳ, ತೊಗರಿ, ಅಲಸಂದೆ, ಎಣ್ಣೆಕಾಳುಗಳು ಎಲ್ಲವನ್ನು ಬೆಳೆಯಬಹುದು. ನೀವು ಪ್ರತಿಸಲ ನಿಮಗೆ ಬೇಕಾದ ಶುದ್ಧವಾದ ಎಣ್ಣೆಯನ್ನು ನೀವೇ ಮಾಡಿಕೊಳ್ಳಬಹುದು. ಇನ್ನು ಕಾಳುಗಳನ್ನು ಹುರಿದು ಮಕ್ಕಳಿಗೆ ಶಾಲೆಯಿಂದ ಬಂದಾಗ ತಿನ್ನುವುದಕ್ಕೆ ಕೊಡಬಹುದು. ಈಗ ಮಕ್ಕಳು ಅಂಗಡಿಯ ಕುರುಕುರೆ ಏನೇನೋ ತಿಂದು ಆರೋಗ್ಯ ಹಾಳುಮಾಡಿಕೊಳ್ಳುತ್ತಾರೆ.

ಕಾಳಿನಿಂದ ಉಸಲಿ, ರಾಗಿಯಿಂದ ಹುರಿಹಿಟ್ಟು ಇನ್ನು ಏನೇನೋ ಶುದ್ಧವಾದ ತಿಂಡಿಯನ್ನು ಮಾಡಬಹುದು. ಈಗ ಪೇಟೆಯಲ್ಲಿ ಸಿಕ್ಕುತ್ತಾಇರೋ ತಿಂಡಿಗಳಲೆಲ್ಲಾ ನೀವು ಬೆಳೆದ ಕಾಳುಕಡ್ಡಿ, ಆಹಾರಧಾನ್ಯವನ್ನೇ ಉಪಯೋಗಿಸುತ್ತಾರೆ.

ಅದಕ್ಕೆ ಒಂದಕ್ಕೆ ನಾಲ್ಕರಂತೆ ಬೆಲೆಹಾಕಿ, ಒಳಗಡೆ ಎರಡುಕಾಳು ಇರಲ್ಲ, ಪ್ಯಾಕೆಟ್

ಗಾಳಿಯಿಂದ ತುಂಬಿರುತ್ತದೆ. ನಿಮ್ಮ ಮಕ್ಕಳು ಹಟ ಮಾಡುತ್ತಾರೆ. ಅವರಿಗೆ ಪ್ರತಿದಿನ ನೀವು ದುಡ್ಡುಕೊಡುವ ಅಭ್ಯಾಸಮಾಡಿದ್ದೀರಿ. ಕಡಲೆಕಾಯಿಗಿಂತ ಪೌಷ್ಟಿಕ ಆಹಾರ ಇನ್ನಿಲ್ಲ. ನೀವು ಬೆಳೆದ ಕಡಲೆಕಾಯಿಯನ್ನು ಹುರಿದು ಡಬ್ಬಿಯಲ್ಲಿ ತುಂಬಿಟ್ಟು ಮಕ್ಕಳು ಶಾಲೆಯಿಂದ ಬಂದ ತಕ್ಷಣ, ಕಡಲೆಕಾಯಿ ಬೆಲ್ಲದ ಚೂರನ್ನು ಕೊಟ್ಟರೆ ಮಕ್ಕಳಿಗೆ ಎಷ್ಟೊ ಸಂತೋಷ. ಮುಖ್ಯವಾಗಿ ನಿಮಗೆ ಭೂಮಿ ಬದುಕಲು ಬೇಕು. ಈಗ ಎಲ್ಲಾ ಆಯ್ತಲ್ಲ. ಉಳಿದ ಜಮೀನಿನಲ್ಲಿ ಕಬ್ಬನ್ನು ಬೆಳೆಯಬಹುದು. ಕಬ್ಬನ್ನೆ ಬೆಳೆಯಲು ಹಟ ಏಕೆ ಹಿಡಿದಿದ್ದೀರಿ? ಹಾಗೂ ಕಬ್ಬನ್ನು ಬೆಳೆದರೆ ಕಾರ್ಖಾನೆಗೆ ಏಕೆ ಹಾಕಬೇಕು? ಅಲ್ಲಲ್ಲೆ ಆಲೆಮನೆಗಳನ್ನು ಮಾಡಿ ನಾಲ್ಕಾರುಮನೆ ಸಂಸಾರಗಳು ಒಟ್ಟಾಗಿ ಬೆಲ್ಲವನ್ನು ತಯಾರಿಸಬಹುದು. ಸಕ್ಕರೆಗಿಂತ ಬೆಲ್ಲ ಆರೋಗ್ಯಕ್ಕೆ ಒಳ್ಳೆಯದು.

ನೀವು ಇನ್ನು ಅನೇಕ ತಪ್ಪುಗಳನ್ನು ಮಾಡುತ್ತೀರಿ, ಎಣ್ಣೆ, ಸಿಗೇಕಾಯಿ ಎಲ್ಲ ನೀವೆ ಬೆಳೆಯುತ್ತೀರಿ, ಸಿಗೇಕಾಯಿಯನ್ನುಮಾರಿ, ಮಕ್ಕಳ ತಲೆಗೆ ಶಾಂಪೂ ತರಿಸುತ್ತೀರಿ. ಹಿಂದಿನ ಕಾಲದಲ್ಲಿ ತಲೆಗೆ ಹರಳೆಣ್ಣೆ ಹಾಕುತ್ತಿದ್ದರು. ಈಗ ಏನೂ ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನೀವು ಟಿ.ವಿಪ್ರಭಾವಕ್ಕೆ ಒಳಗಾಗಿದ್ದೀರಿ. ಅನುಕರಣೆ ಜಾಸ್ತಿ ಮಾಡುತ್ತೀರಿ. ನಿಮ್ಮ ತನವನ್ನು ನೀವು ಉಳಿಸಿಕೊಳ್ಳುತ್ತಿಲ್ಲ. ಅತಿಯಾದ ಆರ್ಥಿಕಬೆಳೆಯನ್ನು ಬೆಳೆದರೆ ಅದಕ್ಕೆ ರಸಗೊಬ್ಬರಗಳನ್ನು ಸುರಿದು ಸರಿಯಾದ ಸಮಯಕ್ಕೆ ನೀರೂ ಇಲ್ಲದೆ ಬೆಳೆಯನ್ನು ಹಾಳುಮಾಡಿಕೊಂಡು ಉಳಿದ ಫಸಲನ್ನು ಕಾರ್ಖಾನೆಗೆ ಹಾಕಿ ಆ ದುಡ್ಡಿಗಾಗಿ ದಿನಾ ಅಲೆದಲೆದು ಸುಸ್ತಾಗಿ ಆರೋಗ್ಯ ಹಾಳುಮಾಡಿಕೊಂಡು ಡಾಕ್ಟರ ಬಳಿಗೂ ಅಲೆಯುವಂತೆ ಮಾಡಿಕೊಳ್ಳುತ್ತೀರ.

ಈ ಎಲ್ಲ ತಾಪತ್ರಯಕ್ಕಿಂತ ನಾನು ಮೊದಲು ಹೇಳಿದಂತೆ, ಅರ್ಧ ಜಮೀನು ಕುಟುಂಬದ, ಕಾಳು, ಕಡ್ಡಿ, ಕಾಯಿಗೆ ಇಟ್ಟುಕೊಂಡು ಮಿಕ್ಕಿದ್ದನ್ನು ಬೆಳೆಮಾಡಿ ಮಾರಿ ಸಂತೋಷದಿಂದ ನೆಮ್ಮದಿಯ ಜೀವನ ಸಾಗಿಸಿ. ನಿಮ್ಮ ಸಂತೋಷವೇ ನಮ್ಮಸಂತೋಷ.

ಇನ್ನು ಹೈನುಗಾರಿಕೆ, ಪ್ಯಾಟೆ ಜನ ಇನ್ನೂ ಮಲಗಿರುವಾಗಲೆ ನೀವು ಎದ್ದು ಹಸುಗಳನ್ನು ಆಚೆ ಕಟ್ಟಿ ಹಾಲು ಕರೆದು ಡೈರಿಗೆ ಹಾಕಲು ಓಡುತ್ತೀರಿ. ನಿಮ್ಮ ಮನೆಗೆ ಸ್ವಲ್ಪ ಹಾಲನ್ನು ಇಟ್ಟುಕೊಳ್ಳದೆ ಡೈರಿ ಲಾರಿ ಹೊರಟು ಹೋಗುತ್ತದೆ ಎಂದು ಬೇಗ ಬೇಗಹೋಗಿ ಹಾಲನ್ನು ಹಾಕಿ ಪ್ಯಾಟೆಗಳಿಗೆ ಹಾಲನ್ನು ಕಳಿಸುತ್ತೀರಿ.

ಅದೇ ತಾಜಾ ಹಾಲನ್ನು ಸರ್ಕಾರ ಖರೀದಿಸಿ ಪುಡಿಮಾಡಿ ನಿಮ್ಮ ಮಕ್ಕಳಿಗೆ ಬಿಸಿನೀರಿನಲ್ಲಿ ಕದರಿಸಿ ಶಾಲೆಯಲ್ಲಿ ಕುಡಿಯಲು ಕೊಡುತ್ತಾರೆ.

ನೀವು ನಿಮ್ಮ ಆರೋಗ್ಯದ ಬಗ್ಗೆ ಒಂದುಚೂರು ಯೋಚಿಸುವುದಿಲ್ಲ. ಇನ್ನು ಮೇಲೆ ನಿಮ್ಮ ಮನೆಯಲ್ಲಿ ಎಷ್ಟು ಜನ ಇದ್ದೀರ ಅಷ್ಟು ಲೋಟ ಹಾಲನ್ನು ಇಟ್ಟುಕೊಂಡು ಮಿಕ್ಕಿದ್ದನ್ನು ಡೈರಿಗೆ ಹಾಕಿ ರಾತ್ರಿ ಊಟದ ನಂತರ ನಿಮ್ಮ ಮನೆಯವರೆಲ್ಲ ಹಾಲನ್ನು ಕಡ್ಡಾಯವಾಗಿ ಕುಡಿಯಿರಿ, ಕುಡೀತೀರ ತಾನೆ?

ಇನ್ನು ಬದುಕಲು ಒಂದು ಆರ್.ಸಿ.ಸಿ.ಮನೆ, ಮನೆಯೊಳಗೊಂದು ಬಣ್ಣದ ಟಿ.ವಿ ಮನೆಯ ಮುಂದೆ ಒಂದು ಮಾರುತಿ ಕಾರು, ಕೈಯಲ್ಲೊಂದು ಮೊಬೈಲ್ ಇಷ್ಟೇ ಅಲ್ಲ ಜೀವನ. ಇವೆಲ್ಲಕ್ಕಿಂತ ಭವ್ಯವಾದ ಬದುಕೊಂದಿದೆ ಹುಡುಕಿ.

ಮಹಾತ್ಮ ಗಾಂಧೀಜಿ: ಆತ್ಮಶಕ್ತಿಯ ಅಚಲ ಹಿಮಾಚಲ

– ಜ.ಹೊ.ನಾರಾಯಣಸ್ವಾಮಿ

ಮಹಾತ್ಮಗಾಂಧೀಜಿ ವಿಶ್ವದ ವಿಶಿಷ್ಟ ಚೇತನ. ತನ್ನದೆಲ್ಲವನ್ನು ಇಲ್ಲವಾಗಿಸಿಕೊಂಡು ಎಲ್ಲವಾಗಿ ನಿಂತ ತ್ಯಾಗಮೂರ್ತಿ. ಬಣ್ಣತಾರತಮ್ಯದ ಪೊರೆಕಳಚಿದ ಅರೆಬೆತ್ತಲ ಮಾಂತ್ರಿಕ. ಧರ್ಮಗಳಲ್ಲೆಲ್ಲಾ ಶ್ರೇಷ್ಠಧರ್ಮ ಹಿಂಸೆಯಲ್ಲ 'ಅಹಿಂಸೆ ಎಂದು ಜಗತ್ತಿಗೆ ಸಾರಿದ ಸಂತ. ಬುದ್ಧಮಹಾವೀರರ ಪ್ರತೀಕವಾದ ಪ್ರಖರ ಶಿಖರ. ಶತ್ರುವಿನ ಹೃದಯದಲ್ಲಿ ಮಿತ್ರತ್ವದ ಜ್ಯೋತಿ ಬೆಳಗಿಸಿದ ಪವಾಡ ಪುರುಷ. ಸರಳತೆಯೆ ಸಂತೃಪ್ತಿಯ ಮೂಲಸೆಲೆ ಎಂಬ ಸತ್ಯವನ್ನು ಕಂಡುಕೊಂಡ ಸಮದರ್ಶಿ. ಈ ಮಹಾಮಹಿಮನನ್ನು ಕುರಿತು ಹಾಡಿ ಹೊಗಳದವರಿಲ್ಲ; ನೆನೆದು ಕೃತಜ್ಞತೆಯ ಕಂಬನಿ ಮಿಡಿಯದವರಿಲ್ಲ; ಮುಕ್ತ ಮನದಿಂದ ತುಡಿದು ನುಡಿಯದವರಿಲ್ಲ.

'ಇಂಥ ವ್ಯಕ್ತಿ ಈ ನೆಲದಮೇಲೆ ಎಂದಾದರೂ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರುವ ಪೀಳಿಗೆ ಸಂದೇಹಿಸದಿರದು' ಎಂದು ಆಲ್ಬರ್ಟ್ ಐನ್‌ಸ್ಟೀನ್ ಹೇಳಿದರೆ 'ನಮ್ಮಂತೆ ಮಾನವನಾಗಿ ಜನಿಸಿ, ನಮ್ಮಂತೆ ಅನ್ನ, ಜಲ, ವಾಯು ಸೇವಿಸಿ ಈ ನೆಲದ ಮೇಲೆ ನಡೆದಾಡಿದ ಈ ವ್ಯಕ್ತಿ ಮಾನವನೇ?' ಎನ್ನುವ ಉದ್ಗಾರ ಜಾರ್ಜ್ ಬರ್ನಾಡ್ ಷಾನದು. 'ಒಂದು ನೂತನ ಮಾನವೀಯತೆಯನ್ನೇ ತಮ್ಮ ತ್ಯಾಗ, ಬಲಿದಾನಗಳಿಂದ ಜೀವಂತಗೊಳಿಸಿದ ಗಾಂಧಿಯನ್ನು ಯುರೋಪಿನ ಯಾವ ಕ್ರಾಂತಿಕಾರಿ ನಾಯಕನೊಡನೆಯೂ ಹೋಲಿಸಲು ಸಾಧ್ಯವಿಲ್ಲ. ವಾಸ್ತವವಾಗಿ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿಯೇ ಉಳಿದವರು. ಅವರನ್ನು ನೆನೆದರೆ ಏಸುವನ್ನು ನೆನೆದಂತೆ' ಎಂದು ರೊಮೇರೋಲಾ ಸ್ಮರಿಸಿದರೆ 'ಕಾಂಗ್ರಿಸ್ಸಿನಂತಹ ಸಂಸ್ಥೆಗಳನ್ನು ಕಟ್ಟಬಹುದು, ವಿಸರ್ಜಿಸಬಹುದು. ಆದರೆ ರಾಷ್ಟ್ರವನ್ನು ಸತ್ಯ, ಪ್ರೇಮಗಳ ಅಖಂಡ ಪ್ರಜ್ಞೆಗೆ ಎಚ್ಚರಿಸುವ ಕಾರ್ಯ ಯಾವ ಕುಶಲ ಕರ್ಮಿಗೂ ಸಾಧ್ಯವಾಗದು. ಈ ಮಹಾಸ್ತ್ರವನ್ನು ಪಡೆದಿರುವ ಮಹಾತ್ಮನಿಗೆ ನಮೋ ಎನ್ನುತ್ತೇನೆ' ಎಂದು ರವೀಂದ್ರನಾಥ ಠಾಗೋರ್ ಪ್ರಶಂಸಿಸಿದರೆ 'ಸೋದರಭಾವದಿಂದ ನಿಮಗೆ ನಮಸ್ಕರಿಸುತ್ತೇನೆ' ಎಂದು ರಷ್ಯಾದ ಶ್ರೇಷ್ಠ ಬರಹಗಾರರಾದ ಬಾಲ್‌ಸ್ಟಾಮ್ ಗಾಂಧೀಜಿಯವರಿಂದ ಪ್ರಭಾವಿತರಾಗಿ ನುಡಿದಿದ್ದಾರೆ. ಗಾಂಧೀಜಿಯವರ ವ್ಯಕ್ತಿತ್ವ ಹಾಗೂ ಅವರ ಅಪ್ರತಿಮ ಸಾಧನೆಯನ್ನು ಕುರಿತು ಹಾಡಿಹೊಗಳದವರಿಲ್ಲ. ಹಿರಿಯರು ಎಂತೋ ಅಂತೆ ಕಿರಿಯರೂ ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿದ್ದಾರೆ. 'ಗಾಂಧೀಜಿ

ಕುಳಿತಲ್ಲಿ ದೇವ ಮಂದಿರವಾಯಿತು, ನಡೆದಲ್ಲಿ ಪವಿತ್ರ ಭೂಮಿಯಾಯಿತು. ಅವರು ತೋರಿರುವ ಮಾರ್ಗದರ್ಶನದಿಂದ ನಮ್ಮ ಬದುಕನ್ನು ಕಟ್ಟಿಕೊಳ್ಳೋಣ' ಎನ್ನುವ ನೆಹರೂ ಅವರ ಮಾತು ಈಗಲಾದರೂ ನಮ್ಮ ರಾಷ್ಟ್ರಜೀವನದಲ್ಲಿ ಆಚರಣೆಗೆ ಬರಬೇಕು. ದೈತ್ಯ ನರ್ತನದಿಂದ ದೂರಾಗಿ ದೈವತ್ವದ ಸನ್ನಿಧಿಗೆ ಸಾಗಬೇಕು.

'ನಮ್ಮನ್ನು ನಾವು ಕಂಡುಕೊಳ್ಳಲು ಇರುವ ಅತ್ಯುತ್ತಮ ಮಾರ್ಗ ಎಂದರೆ ಸಹಜೀವಿಗಳ ಸೇವೆಯಲ್ಲಿ ನಿರತರಾಗುವುದು' ಎನ್ನುವ ಗಾಂಧೀಜಿಯವರ ಮಾತು ಒಂದು ದಿವ್ಯ ಮಂತ್ರ. ಆಟಂಬಾಂಬಿಗಿಂತ ಮಿಗಿಲಾದ ಶಕ್ತಿತುಂಬಿದ ಮಂತ್ರ. ಅದರ ಗುರಿ ಆಟಂಬಾಂಬಿನಂತೆ ನಾಶವಲ್ಲ, ಪ್ರಕೃತಿ ಮಾತೆಯ ಒಡಲಿನಂತೆ ನಿರ್ಮಾಣ. ದೇಹಕ್ಕೆ ಬೆನ್ನೆಲುಬು ಹೇಗೋ ಹಾಗೆ ಬದುಕಿಗೆ ಸೇವೆಯೇ ಆಧಾರ. ಅದಕ್ಕೆ ಅದನ್ನು 'ಸೇವಾಧಾರ' ಎಂದು ಕರೆಯಲಾಗಿದೆ.

ಗಾಂಧೀಜಿಯವರ ಮೇಲಿನ ಮಾತನ್ನು ಒಂದು ದಿವ್ಯ ಮಂತ್ರ ಎಂದೆ. ಮಂತ್ರ ಎಂದರೆ ಏನು? ಡಾ.ಕೆ.ಎಸ್.ಭಗವಾನ್ ವೈಜ್ಞಾನಿಕ ನೆಲೆಯಲ್ಲಿ ಹೀಗೆ ಹೇಳಿದ್ದಾರೆ. 'ಅರ್ಥವಾಗದ ಶಬ್ದವ?ಅಲ್ಲ. ಗಾಬರಿಹುಟ್ಟಿಸುವ ಶ್ಲೋಕವೆ? ಅಲ್ಲ. ಯಾವ ಮಾತಿನಿಂದ ನಮಗೆ ಶಕ್ತಿ ಬರುತ್ತದೆಯೋ ಅದೇ ಮಂತ್ರ. ಎಂಥ ಶಬ್ದಗಳಿಂದ ನಮಗೆ ಜೀವನದ ಸಮಸ್ಯೆಗಳನ್ನು ಎದುರಿಸಲು ಸಾಹಸಭಾವ ಸ್ಫುರಿಸುತ್ತದೆಯೋ, ಯಾವುದಕ್ಕೆ ಅಂಜದ ಉದ್ಗಾರಿಕೆ ಬೆಳೆಯುತ್ತದೆಯೋ ಅದೇ ಮಂತ್ರ. ಒಟ್ಟಿನಲ್ಲಿ ಶಕ್ತಿಕೊಡುವ ಮಾತೆಲ್ಲ ಮಂತ್ರ. ಮಂತ್ರವೆಂದರೆ ಕಾಣದ ಭೂತ ಪಿಶಾಚಿ ದೆವ್ವ ದೇವರನ್ನು ಆವಾಹನೆ ಮಾಡುವ ಅಥವಾ ಓಡಿಸುವ ಜೀವ ಮಾರಕ ಕೀಳು ತಂತ್ರವಲ್ಲ. ಮನುಷ್ಯನಲ್ಲಿ ಸುಪ್ತವಾಗಿರುವ ಶಕ್ತಿಯ ಸೆಲೆ ಹರಿಯುವಂತೆ ಮಾಡುವ ಸಾಧನವೇ ಮಂತ್ರ' ಆದ್ದರಿಂದ ವ್ಯಕ್ತಿ ತನ್ನ ಶಕ್ತಿಯನ್ನು ಸೇವೆಗೆ ತೊಡಗಿಸಿದಾಗ ಅದು ದಿವ್ಯ ಮಂತ್ರ ಶಕ್ತಿಯಾಗಿ ಒಳಗನ್ನು ಬೆಳಗುತ್ತದೆ. ಆಗ ಹೃದಯದಲ್ಲಿ ತುಂಬಿರುವ ಕತ್ತಲೆ ಕಳೆದು ಬೆಳಕು ಹರಿಯುತ್ತದೆ. ಪ್ರತಿಯೊಬ್ಬರ ಹೃದಯದಲ್ಲೂ ಬೆಳಕು ಬಳಗುವಂತಾಗಲು ಗಾಂಧೀಜಿ ತೋರಿದ ದಿವ್ಯ ಮಾರ್ಗ ಎಂದರೆ ಸಹಜೀವಿಗಳ ಸೇವೆ. ಸ್ವಾರ್ಥರಹಿತವಾದಷ್ಟು ಅದರ ಸಾರ್ಥಕತೆ ವೃದ್ಧಿಸುತ್ತದೆ.

ಇಂದು ಅಂತಃಕರಣವಿರದ ಖಾಸಗೀಕರಣ, ಜಾಗತೀಕರಣ, ಗೋಳೀಕರಣ ಭಾರತವನ್ನು ನುಂಗಿನೊಣೆಯಲು ಹೊರಟಿವೆ. ಅಂದು ಒಂದು 'ಈಸ್ಟ್ ಇಂಡಿಯಾ' ಕಂಪೆನಿ ವ್ಯಾಪಾರದ ನೆಪದಲ್ಲಿ ಬಂದಿದ್ದರೆ ಸ್ವತಂತ್ರ ಭಾರತದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳನ್ನು ಕೆಂಪುಹಾಸು ಹಾಸಿ ಆಹ್ವಾನಿಸುವ ದುರಂತ ಪರಿಸ್ಥಿತಿ ನಿರ್ಮಾಣವಾಗಿದೆ. ಬೃಹತ್ ಕಂಪೆನಿಗಳು ತಮ್ಮ ದೈತ್ಯ ನರ್ತನದಲ್ಲಿ ನಿರತವಾಗಿದೆ. ಸರಳತೆಯೇ ಬದುಕಿನ ಸತ್ಯ ಹಾಗೂ ಸೌಂದರ್ಯ ಎಂಬ ಗಾಂಧೀಜಿಯವರ ಅಮೃತವಾಣಿಯನ್ನು ಕಾಲಕಸವಾಗಿ ಕಡೆಗಣಿಸಲಾಗಿದೆ. ಗಾಂಧೀಜಿಯವರ ಚರಕವನ್ನು ಬೆಂಬಲಿಸುತ್ತಿದ್ದವರ

ಹೃದಯದಲ್ಲಿ ಬೃಹತ್‌ಗಿರಣಿಗಳಿದ್ದು ಅವು ಇಂದು ಕ್ರಿಯಾಶೀಲವಾಗಿ ಗಾಂಧೀಜಿಯವರ ಚರಕವನ್ನು ಪ್ರದರ್ಶನದ ವಸ್ತುವನ್ನಾಗಿಸಲಾಗಿದೆ. ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆ ಗರಿಗೆದರಲಾಗದೆ ನರಳುತ್ತಿರುವುದರ ಪರಿಣಾಮವಾಗಿ ಇಂದು ನಗರಗಳು ನರಕ ಸದೃಶವಾಗಿದ್ದರೆ ಹಳ್ಳಿಗಳು ಆತ್ಮವನ್ನು ಕಳೆದುಕೊಂಡು ಪ್ರೇತಸದೃಶವಾಗುತ್ತಿವೆ. ಶ್ರೀಮಂತ ಅತಿ ಶ್ರೀಮಂತನಾಗುತ್ತಿದ್ದರೆ ಬಡವ ಕಡು ಬಡವನಾಗುವ ದುಸ್ಥಿತಿ ಪ್ರಾಪ್ತವಾಗಿದೆ.

'ಇದು ನಮ್ಮ ದೇಶ. ಇದರ ನಿರ್ಮಾಣದಲ್ಲಿ ನಮ್ಮದೂ ಧ್ವನಿಯಿದೆ ಎಂದು ಎಲ್ಲಿ ಕಡು ಬಡವರೂ ಭಾವಿಸಬಲ್ಲರೋ, ಜನರ ಮಧ್ಯೆ ಶ್ರೀಮಂತ ಬಡವರೆಂಬ ತಾರತಮ್ಯ ಎಲ್ಲಿ ಇರುವುದಿಲ್ಲವೋ, ಸಂಪೂರ್ಣ ಸೌಹಾರ್ದತೆಯಲ್ಲಿ ಎಲ್ಲಾ ಸಮುದಾಯದವರೂ ಜೀವಿಸಬಲ್ಲರೋ, ಅಸ್ಪೃಶ್ಯತೆಯ ಶಾಪವಾಗಲೀ, ಮದ್ಯ ಮಾದಕಗಳ ಶಾಪವಾಗಲೀ ಎಲ್ಲಿ ತಟ್ಟದೋ ಅಂಥ ಭಾರತದ ನಿರ್ಮಾಣಕ್ಕಾಗಿ ನಾನು ಶ್ರಮಿಸುತ್ತೇನೆ. ಇಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಹಕ್ಕಿರಬೇಕು ಹಾಗೂ ನಾವು ಜಗತ್ತಿನ ಎಲ್ಲರೊಂದಿಗೆ ಶಾಂತಿಯುತವಾಗಿ ಬಾಳುವಂತಿರಬೇಕು. ಇದು ನನ್ನ ಕನಸಿನ ಭಾರತ.' ಎಂದ ಗಾಂಧೀಜಿಯವರ ಭಾರತ ಕನಸಾಗಿಯೆ ಉಳಿದಿದೆ. ಬಡವರ ದನಿಯನ್ನು ದಮನಗೈಯಲಾಗಿದೆ. ಬಡವರ ಹಾಗೂ ಶ್ರೀಮಂತರ ನಡುವಿನ ತಾರತಮ್ಯ ಮುಗಿಲು ಮುಟ್ಟಿದೆ. ಸಮುದಾಯಗಳ ನಡುವೆ ಸೌಹಾರ್ದತೆ ಸಾವಿನ ಕಡೆ ಸಾಗಿದೆ. ಅಸ್ಪೃಶ್ಯತೆ ಅಳಿಯದೆ. ಹೂಂಕರಿಸುತ್ತಲೇ ಇದೆ. ಮಾದಕತೆ ವಿವಿಧ ಮುಖಗಳಲ್ಲಿ ಮನೆ ಮನೆಯನ್ನು ಹೊಕ್ಕಿವೆ. ಸ್ತ್ರೀ ಪುರುಷರ ನಡುವಿನ ಮಧುರ ಬಾಂಧವ್ಯ ಬೆಸೆದುಕೊಳ್ಳಲಾರದಷ್ಟು ಬಿರುಕು ಬಿಟ್ಟು ಪಾತಾಳದತ್ತ ಸಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ತನ್ನ ಪ್ರಾಬಲ್ಯವನ್ನು ಮೆರೆಯುತ್ತಲೇ ಸಾಗಿದೆ. ಜಗತ್ತಿನಲ್ಲಿ ಶಾಂತಿಯುತವಾಗಿ ಬಾಳುವುದಿರಲಿ, ರಾಷ್ಟ್ರರಾಷ್ಟ್ರಗಳ ನಡುವೆ, ದೇಶದ ರಾಜ್ಯರಾಜ್ಯಗಳ ನಡುವೆ, ಕಡೆಗೆ ಮನೆಮನೆಯಲ್ಲೂ ಮನಮನದಲ್ಲೂ ಸಂಘರ್ಷದ ಲಾವಾರಸ ಕುದಿಯುತ್ತಲೆ ಇದೆ. ಅಭಿವೃದ್ಧಿಯ ಹೆಸರಿನಲ್ಲಿ ಭಾರತ ಮುನ್ನಡೆಯುತ್ತಿರುವಂತೆ ಕಂಡರೂ ವಾಸ್ತವವಾಗಿ ಅದರ ನಡೆ ಹಿಮ್ಮುಖವಾಗಿದೆ. ಭೌತಿಕವಾಗಿ ಅಷ್ಟಿಷ್ಟು ಪ್ರಗತಿ ಸಾಧಿಸಿದರೂ ನೈತಿಕವಾಗಿ ಭಾರತ ಪಾತಾಳಕ್ಕೆ ಕುಸಿದಿದೆ. ಆಗಿರುವ ಪ್ರಗತಿಯೂ ನೆಮ್ಮದಿಗೆ ಪೂರಕವಾಗದೆ ಮರೀಚಿಕೆಯಾಗಿದೆ.

ಆಧುನಿಕ ಆವಿಷ್ಕಾರಗಳು ಬದುಕಿಗೆ ಅಷ್ಟಿಷ್ಟು ಒದಗಿ ಬಂದಿದ್ದರೂ ಅವುಗಳ ಅಪಬಳಕೆಯಿಂದ ನೆಮ್ಮದಿ ಕದಡಿ ಅಶಾಂತಿಯ ಸುಳಿಗೆ ಸಿಲುಕುವಂತಾಗಿದೆ. ಗಾಂಧೀಜಿಯವರ ನೆಮ್ಮದಿಯ ಗ್ರಾಮಸ್ವರಾಜ್ಯ ಸ್ವತಂತ್ರ ಭಾರತದಲ್ಲಿ ಹೇಳ ಹೆಸರಿಲ್ಲದಂತಾಗಿದೆ. ನಿತ್ಯ ಬದುಕಿಗೆ ಬೇಕಾಗಿದ್ದ ಬಂಡಿಗಳು ಮಂಡಿಕಳಚಿಕೊಂಡು ಬಿದ್ದಿವೆ. ಬೃಹತ್ ಯಂತ್ರಗಳ ಪಾಶವಿ ಹಿಡಿತಕ್ಕೆ ಸಿಕ್ಕಿ ಮನುಷ್ಯ ನಿಷ್ಕ್ರಿಯನಾಗಿ ಬಳಲಿ

ಬೆಂಡಾಗುವ ಪರಿಸ್ಥಿತಿ ಪ್ರಾಪ್ತವಾಗುತ್ತಿದೆ. ಇವೆಲ್ಲದಕ್ಕೂ ಕಾರಣವಾಗಿರುವ ಏಳು ಸಾಮಾಜಿಕ ಪಾಪಗಳನ್ನು ಹೇಳಿ ಎಚ್ಚರಿಸಿದ್ದರು. ಅವುಗಳೆಂದರೆ

೧. ತತ್ವರಹಿತರ ರಾಜಕಾರಣ : Politics without principals
೨. ದುಡಿಮೆ ಇಲ್ಲದ ಸಂಪತ್ತು : Wealth without work
೩.ಆತ್ಮಸಾಕ್ಷಿ ಇಲ್ಲದ ಸಂತೋಷ : Pleasure without conscience
೪. ಚಾರಿತ್ರ್ಯವಿಲ್ಲದ ಶಿಕ್ಷಣ : Education without character
೫. ನೀತಿ ಇಲ್ಲದ ವ್ಯಾಪಾರ : Commerce without Morality
೬. ಮಾನವೀಯತೆ ಇಲ್ಲದ ವಿಜ್ಞಾನ: Science without Humanity
೭. ತ್ಯಾಗವಿಲ್ಲದ ಪೂಜ : Worship without Sacrifice

ದಶಕಗಳು ಕಳೆದಂತೆ ಈ ಏಳು ಸಾಮಾಜಿಕ ಪಾಪಗಳು ಹಿಂಗುವ ಬದಲು ಹಿಗ್ಗಿ ಕೇಕೆ ಹಾಕುತ್ತ ಕುಣಿಯುತ್ತ ಸಾಗಿದೆ. ಡಾ.ರಾಮ ಮನೋಹರ ಲೋಹಿಯಾ ಅವರು 'ಸ್ವಾತಂತ್ರ್ಯಾನಂತರ ಕಾಣಿಸಿಕೊಂಡ ಭಾರತ ಒಂದು ವಿಚಿತ್ರ ಭಾರತ. ಸ್ವಾತಂತ್ರ್ಯ ಪೂರ್ವದಲ್ಲಿ ಹೊರಗೆ ಕತ್ತಲೆ ಕವಿದಿತ್ತು, ಆದರೆ ಒಳಗೆ ಬೆಳಕಿತ್ತು. ಈಗ ಹೊರಗೆ ಸ್ವಾತಂತ್ರ್ಯದ ಬೆಳಕಿದೆ, ಆದರೆ ಕತ್ತಲೆ ಹೃದಯವನ್ನಾವರಿಸಿಕೊಂಡಿದೆ'.ಎಂದಿದ್ದಾರೆ ನಿಜ. ಅದು ಈಗ ಕಗ್ಗತ್ತಲಾಗಿ ಕವಿಯುತ್ತಿರುವುದು ದುರದೃಷ್ಟವೇ ಸರಿ.

ಸ್ವಾತಂತ್ರ ಪೂರ್ವದಲ್ಲಿ ಗಾಂಧೀಜಿ ಸ್ವದೇಶಿ ಆಂದೋಲನಕ್ಕೆ ಚಾಲನೆ ನೀಡಿ ವಿದೇಶಿ ವಸ್ತ್ರಗಳನ್ನು ಸುಟ್ಟುಹಾಕಲು ಕರೆಕೊಟ್ಟಿದ್ದರು. ಅದಕ್ಕೆ ಸ್ಪಂದಿಸಿದ ದೇಶಾಭಿಮಾನಿಗಳು ವಿದೇಶಿ ವಸ್ತ್ರಗಳನ್ನು ಸುಟ್ಟು ಸ್ವದೇಶಿ ವಸ್ತ್ರಗಳನ್ನು ತೊಟ್ಟು ಸ್ವಾಭಿಮಾನವನ್ನು ಉದ್ದೀಪನಗೊಳಿಸಿಕೊಂಡಿದ್ದರು. ಆದರೆ ದಶಕಗಳು ಭಾರತೀಯರಲ್ಲಿ ವಿದೇಶೀ ವ್ಯಾಮೋಹ ಹೆಚ್ಚುತ್ತಿದೆ. ತಮ್ಮದೆನ್ನುವುದೆಲ್ಲವನ್ನು ಗೌಣವಾಗಿಸಿಕೊಳ್ಳುವ ಪ್ರವೃತ್ತಿ ಉಲ್ಬಣಗೊಳ್ಳುತ್ತಿದೆ. ಶತಮಾನದ ಹಿಂದೆಯೆ ಸ್ವಾಮಿ ವಿವೇಕಾನಂದರು 'ಜಪಾನಿನಲ್ಲಿ ನಾವು ಜ್ಞಾನದ ಸಮೀಕರಣವನ್ನು ನೋಡುತ್ತೇವೆ, ನಮ್ಮಲ್ಲಿರುವಂತೆ ಅಜೀರ್ಣತೆಯನ್ನಲ್ಲ. ಅವರು ಐರೋಪ್ಯರಿಂದ ಎಲ್ಲವನ್ನೂ ತೆಗೆದುಕೊಂಡಿದ್ದಾರೆ. ಆದರೆ ಅದೇ ಕಾಲದಲ್ಲಿ ಜಪಾನೀಯರಾಗಿಯೇ ಉಳಿದಿದ್ದಾರೆ, ಐರೋಪ್ಯರಾಗಿಲ್ಲ. ನಮ್ಮ ದೇಶದಲ್ಲಾದರೋ ಪಾಶ್ಚಾತ್ಯನಾಗಿಬಿಡಬೇಕೆಂಬ ತೀವ್ರ ಹುಚ್ಚು ಪ್ಲೇಗಿನಂತೆ ನಮ್ಮನ್ನು ಹಿಡಿದುಕೊಂಡಿದೆ. ಅಯ್ಯೋ ! ದೇಶ ಇಂಥ ದುರವಸ್ಥೆಗಿಳಿದಿದೆ! ಜನರು ತಮ್ಮಲ್ಲಿರುವ ಚಿನ್ನವನ್ನೆ ಹಿತ್ತಾಳೆಯಂತೆ ನೋಡುವರು. ಪರದೇಶಿಯರ ಹಿತ್ತಾಳೆಯೆ ಚಿನ್ನ ಇವರಿಗೆ! ಆಧುನಿಕ ವಿದ್ಯಾಭ್ಯಾಸದಿಂದ ಉದ್ಭವಿಸಿದ ಯಕ್ಷಿಣಿ ಇದು' ಎಂದು ನೊಂದು ನುಡಿದಿದ್ದರು. ಅದು ಕರಗುವ ಬದಲು ಹೆಚ್ಚು ಹೆಚ್ಚು ಕೊನರುತ್ತಲೇ ಸಾಗುತ್ತಿರುವುದು ನಮ್ಮ ಮಾನಸಿಕ ಗುಲಾಮೀಯತೆಯ ಪ್ರತೀಕವಾಗಿದೆ.

ನಮ್ಮ ದೇಶದ ಶ್ರೇಷ್ಠ ನ್ಯಾಯವಾದಿಗಳೂ, ಆರ್ಥಿಕತಜ್ಞರೂ ಆಗಿದ್ದ ನಾನಿಪಾಲ್ಕಿವಾಲ ಜಪಾನ್ ದೇಶದ ಮಂತ್ರಿಯೊಬ್ಬರನ್ನು ಭೇಟೀಯಾದಾಗ ಒಂದು ಪ್ರಶ್ನೆ ಕೇಳಿದರು. "ನಾವು ಜಪಾನ್ ದೇಶದ ಜನರಿಗಿಂತ ಕಡಿಮೆ ಬುದ್ಧಿಶಾಲಿಗಳೇನೂ ಅಲ್ಲ. ನೀವಾದರೋ ಜಗತ್ತಿನ ಉನ್ನತ ರಾಷ್ಟ್ರಗಳಲ್ಲಿ ಅತ್ಯುನ್ನತ ಸ್ಥಾನಗಳಿಸಿಕೊಂಡಿದ್ದೀರಿ. ಆದರೆ ನಾವಿನ್ನೂ ಕೊಳೆ ಕೊಂಪೆಯಲ್ಲಿ ನರಳುತ್ತಿದ್ದೇವೆ. ಇದಕ್ಕೇನು ಕಾರಣ?" ಅದಕ್ಕೆ ಅವರು ನೀಡಿದ ಉತ್ತರ "ನನ್ನ ಸ್ನೇಹಿತರೆ! ಜಪಾನಿನಲ್ಲಿ ನಾಗರಿಕರಿದ್ದಾರೆ. ನಿಮ್ಮಲ್ಲಿ ವ್ಯಕ್ತಿಗಳಿದ್ದಾರೆ". ನಿಜ ನಾಗರಿಕನಿಗೂ, ಜನರಿಗೂ ಎಷ್ಟು ವ್ಯತ್ಯಾಸವಿದೆ ಅಲ್ಲವೆ? ಅಂದರೆ ನಾವು ನಾಗರಿಕರೆನಿಸಿಕೊಳ್ಳುವುದು ಯಾವಾಗ? ಇದು ನಮ್ಮ ಮಾತೃಭಾಷೆಯ ಶಿಕ್ಷಣದಿಂದ ವಂಚಿತರಾದುದರ ಫಲ ಅಲ್ಲವೆ?

ಬ್ರಿಟಿಷರ ಆಳ್ವಿಕೆಯಿಂದ ಬಿಡಿಸಿಕೊಂಡರೂ ಅವರ ಭಾಷೆಗೆ ಗುಲಾಮರಾಗಿಯೆ ಉಳಿದಿದ್ದೇವೆ. 'ಇಂಗ್ಲೀಷ್ ಇಲ್ಲದೆ ನಾವು ಬದುಕಲಾರೆವು ಎಂದು ಭಾವಿಸುವುದು ನಮ್ಮ ಮಾನಸಿಕ ಗುಲಾಮೀಯತೆಯ ಪರಿಣಾಮ' ಎಂದು ಗುರುತಿಸಿದ ಗಾಂಧೀಜಿ ಮಾತೃಭಾಷೆಯ ಮಹತ್ವವನ್ನು ಕುರಿತು 'ಕೊರತೆಗಳೇನೇ ಇರಲಿ, ನನ್ನ ತಾಯಿಯ ಎದೆಗೆ ಅಂಟಿಕೊಳ್ಳುವಂತೆಯೇ ನನ್ನ ತಾಯ್ನಾಡಿಗೂ ನಾನು ಅಂಟಿಕೊಳ್ಳಬೇಕು. ಅದು ಮಾತ್ರವೇ ನನಗೆ ಪ್ರಾಣದಾಯಕ ಹಾಲನ್ನು ಉಡಬಲ್ಲದು' ಎಂದಿದ್ದಾರೆ.

ಭಾರತಕ್ಕೆ ಶಕ್ತಿಯ ಹಾಗೂ ಮುಕ್ತಿಯ ಮಾರ್ಗವನ್ನು ತೋರಿದ ಮಹಾತ್ಮ ಗಾಂಧೀಜಿಯವರ ಚಿಂತನೆಗಳನ್ನು, ಮನುಕುಲದ ಮುನ್ನಡೆಗೆ ಇಂಬಾದ ವಿಚಾರಗಳನ್ನು ಇನ್ನಾದರೂ ಅಳವಡಿಸಿಕೊಳ್ಳುವ ವಿವೇಕದ ಕಣ್ಣು ತೆರೆದೀತೆ?!

ಸತ್ಯವಾಗಿ ಇರಬೇಕೆಂದು ಒತ್ತಾಯಿಸುವುದೇ ಕ್ರಾಂತಿಕಾರಕ ತತ್ವ

– ಆಚಾರ್ಯ ಕೃಪಲಾನಿ

(೧೯೪೮ ಮಾರ್ಚ್ ೧೧ರಿಂದ ಮಾರ್ಚ್ ೧೫ರವರೆಗೆ ಬಹು ಐತಿಹಾಸಿಕವಾದ ಸಮ್ಮೇಳನ ನಡೆಯಿತು. ಅದು ನಡೆದದ್ದು ಗಾಂಧೀಜಿಯವರು ಸ್ಥಾಪಿಸಿದ್ದ ಸೇವಾಗ್ರಾಮ್ ಆಶ್ರಮದಲ್ಲಿ. ಆ ಸಮ್ಮೇಳನದ ಉದ್ದೇಶ ಗಾಂಧಿ ಹೋದರು ನಮಗೀಗ ದಿಕ್ಕು ತೋರುವವರು ಯಾರು? ಎಂಬ ವಿಷಯ ಕುರಿತು ಇತ್ತು. ಆ ಸಮ್ಮೇಳನದಲ್ಲಿ ಆಗಿನ ಎಲ್ಲ ರಾಷ್ಟ್ರೀಯ ನಾಯಕರು ಸೇರಿದ್ದರು. ಆ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ೧೯೪೮ಮಾರ್ಚ್ ೧೫ರಂದು ಚರಿತ್ರೆಯ ಪ್ರಾಧ್ಯಾಪಕರು, ಪ್ರಖರ ಚಿಂತಕರು ಆಗಿದ್ದ ಆಚಾರ್ಯ ಕೃಪಲಾನಿಯವರು ಮಾಡಿದ ಭಾಷಣವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಕೃಪಲಾನಿಯವರು ತಮ್ಮ ಭಾಷಣದಲ್ಲಿ ಗಾಂಧಿಯವರ ಬಗೆಗಿನ ತಮ್ಮ ವಿಚಾರಗಳನ್ನು ತಿಳಿಸಿದ್ದಾರೆ.– ಸಂಪಾದಕ)

ಕೆಲವು ಪ್ರಾಚೀನ ಕಲ್ಪನೆಗಳನ್ನು ಬಾಪು ನಮ್ಮ ಮುಂದಿಟ್ಟಿದ್ದಾರೆ. ನಾನು ಅರ್ಥಮಾಡಿಕೊಂಡಂತೆ ಅವರು ಈ ಹಳೆಯ ತತ್ವಗಳನ್ನೇ ಕ್ರಾಂತಿಕಾರಕವಾಗುವಂತೆ ಮಾಡಿದ್ದಾರೆ. ನಮ್ಮ ಕ್ರಾಂತಿಕಾರಿ ಯುಗದ ಬೇಡಿಕೆಗಳನ್ನು ಈಡೇರಿಸುವ ದಾರಿ ಅವುಗಳಲ್ಲಿ ಕಂಡುಬರುತ್ತಿದೆ. ಯಾವ ಸಂದರ್ಭದಲ್ಲಿ ಯಾವುದು ಕ್ರಾಂತಿಯನ್ನು ಪ್ರಚೋದಿಸುವ ಶಕ್ತಿಯಾಗಿರುತ್ತದೋ ಅದು ಕ್ರಾಂತಿಕಾರಿ ಎನಿಸಿಕೊಳ್ಳುತ್ತದೆ. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿ ಬಂದಾಗ ವಿದೇಶೀ ಸರ್ಕಾರವನ್ನು ಕಿತ್ತೊಗೆಯಬೇಕೆಂಬುದು ಆ ಕಾಲದ ಬೇಡಿಕೆಯಾಗಿತ್ತು. ಇದು ಕ್ರಾಂತಿಗೆ ಆ ಕ್ಷಣದ ಪ್ರಚೋದಕ. ಈ ವಿದೇಶೀ ಆಡಳಿತವನ್ನು ಕಿತ್ತೊಗೆಯಬೇಕೆನ್ನುವವರು ಎರಡು ವಿಧವಾಗಿದ್ದರು. ಮೃದು ಧೋರಣೆ ಮತ್ತು ಕಠಿಣ ಧೋರಣೆಯವರು. ಇಬ್ಬರೂ ಕ್ರಾಂತಿಯ ವಿಧಾನಗಳನ್ನು ಕಂಡುಕೊಳ್ಳಲಿಲ್ಲ. ಎರಡನೆಯ ವಿಧಾನ ಬಾಂಬುಗಳನ್ನು ಸಿಡಿಸುವುದಾಗಿತ್ತು. ಬಾಂಬು ಹಾಕುವುದು, ಮತ್ತು ಇಂಥವೇ ಹಿಂಸಾತ್ಮಕ ವಿಧಾನಗಳು ಭಾರತದ ಸಂದರ್ಭದಲ್ಲಿ ಹೆಚ್ಚು ಬಾಳಿಕೆಗೆ ಬರುವುದಿಲ್ಲ. ಮಹಾತ್ಮರ ಅಹಿಂಸಾತ್ಮಕ ಹಾದಿ ಹೆಚ್ಚು ಕ್ರಾಂತಿಕಾರಿಯಾದದ್ದು. ಯಾಕೆಂದರೆ ಅದು ಆ ಕಾಲಕ್ಕೆ ಸಂಗತವಾಗಿತ್ತು. ಬಾಂಬುಹಾಕುವ ವಿಧಾನ ಜನರನ್ನು ತಟ್ಟಲಿಲ್ಲ. ಅದು ಜನರನ್ನು ಭಯದಿಂದ ಮುಕ್ತರಾನ್ನಾಗಿಸುವಂಥದಲ್ಲ. ಬಾಂಬಿಗಿಂತ ಅಹಿಂಸೆ ಮೇಲು ಎಂಬ ಗಾಂಧೀಜಿಯ ವಿಧಾನ ತುಂಬಾ ಪರಿಣಾಮಕಾರಿ ಎಂಬುದನ್ನು ಸಾಬೀತುಮಾಡಿತು.

೧೯೧೭, ೧೯೧೮, ೧೯೧೯, ೧೯೨೦ರಲ್ಲಿ ನಾನು ಚರಿತ್ರೆಯ ಪ್ರಾಧ್ಯಾಪಕನಾಗಿದ್ದೆ. ಚರಕದ ಮೂಲಕ ನೂಲುವುದು ಶುದ್ಧ ಮೂರ್ಖತನ ಎಂದು ಭಾವಿಸಿದ್ದೆ. ನನ್ನ ವೃತ್ತಿ, ನನ್ನ ಶಿಕ್ಷಣ ಮತ್ತು ತರಬೇತಿ ಎಲ್ಲವೂ ಅದರ ವಿರುದ್ಧವೇ ವಾದಿಸುವಂತಿದ್ದವು. ಆದರೆ ಆ ಹಿರಿಯ ಮನುಷ್ಯ ಚರಕಕ್ಕೂ ಮತ್ತು ಕ್ರಾಂತಿಗೂ ಸಂಬಂಧ ಕಲ್ಪಿಸಿದರು. ಆಗ ನಾನು ನೂಲುವುದಕ್ಕೆ ತೊಡಗಿದೆ.

ಬೇರೆಲ್ಲಾ ಇರಲಿ, ಪ್ರಾರ್ಥನೆಯಂಥದ್ದು ಕೂಡಾ ಕ್ರಾಂತಿಕಾರಿ ಚಟುವಟಿಕೆಯಾಗಿಬಿಟ್ಟಿತು. ನಾನಂತೂ ತುಂಬಾ ಒಳ್ಳೆಯ ವ್ಯಕ್ತಿ. ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸಿಯೇ ಶುದ್ಧೀಕರಣಗೊಳ್ಳಬೇಕಾಗಿರಲಿಲ್ಲ. ಆದರೇನು ಮಾಡುವುದು ಈ ಪ್ರಾರ್ಥನಾ ಸ್ಥಳದಲ್ಲಿಯೇ ಆ ನಮ್ಮ ನಾಯಕ ರಾಜಕೀಯ ಅಂಶಗಳನ್ನು ತಿಳಿಸುತ್ತಿದ್ದದ್ದು. ಕ್ರಾಂತಿಯನ್ನು ಪ್ರಾರ್ಥನೆಯ ಸನ್ನಿವೇಶದಲ್ಲಿ ತಂದಿರಿಸಿಬಿಟ್ಟರು. ಈ ದೇಶದಲ್ಲಿ ಯಾವ ಸುಸಂಸ್ಕೃತ ಮನುಷ್ಯ ತಾನೆ ಕಸಗುಡಿಸುವ ಕೆಲಸಮಾಡಬಲ್ಲ? ಆದರೆ ಗಾಂಧೀಜಿ ಅದನ್ನೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಜೋಡಿಸಿಬಿಟ್ಟರು.

೧೯೩೦ರಲ್ಲಿ ಆ ಹಿರಿಯ ಮನುಷ್ಯ ನಮಗೆ ಉಪ್ಪು ತಯಾರಿಸಲು ಹೇಳಿದರು. ಮೋತಿಲಾಲ್‌ಜಿ ನಕ್ಕರು. ಆದರೆ ಗಾಂಧೀಜಿಗೆ ಒಂದು ವಿಧದ 'ಕಾಣ್ಕೆ'ಯ ಶಕ್ತಿ ಇತ್ತು. ಅದು ವಸ್ತು ಸ್ಥಿತಿಯನ್ನು ಕೆಡವಿ ಬೀಳಿಸಿ ಬಿಡುವಂಥದ್ದು. ಬಂಡಿ ಹೊಡೆಯುವ ಮನುಷ್ಯ ಎತ್ತಿನ ಬಂಡಿಯಲ್ಲೇ ಪ್ರಯಾಣಿಸುತ್ತಾನೆಂದು ನೀವು ಊಹಿಸಿದರೆ ಅವರು ಬರಿಗಾಲಲ್ಲಿಯೇ ನಡೆದುಬಿಟ್ಟರು. ದಂಡಿಯ ಸಮುದ್ರ ತೀರದಲ್ಲಿ ಆತ ತಯಾರಿಸಿದ್ದು ಉಪ್ಪನ್ನಲ್ಲ, ಕ್ರಾಂತಿಯನ್ನು. ಮಗನ್‌ವಾಡಿಯಲ್ಲಿ ನಾವೆಲ್ಲ ಕಹಿ ಬೇವನ್ನು ತಿನ್ನುವಂತೆ ಮಾಡಿದರು. ಎಣ್ಣೆಹೋಳಿಗೆಯಂತೆ ಕಚ್ಚಾಮೇವನ್ನು ಕೂಡ ಅವರು ನಮಗೆ ತಿನಿಸಿಬಿಟ್ಟರು. ಯಾವುದೇ ಪ್ರತಿಭಟನೆಯೂ ಇಲ್ಲದೆ ನಾವದನ್ನು ತಿಂದೆವು. ನಾವು ಏನೂ ಮಾಡುವಂತಿರಲಿಲ್ಲ. ಹೇಗಿದ್ದರೂ ನಮಗೆ ಸ್ವಾತಂತ್ರ್ಯವೇ ಇರಲಿಲ್ಲವಲ್ಲ! ಈ ಎಲ್ಲದರ ಹಿಂದೆ ಆ ಕ್ರಾಂತಿಕಾರಕ ಸ್ಫೂರ್ತಿ ಇತ್ತು.

ಈ ಎಲ್ಲ ಸಂಗತಿಗಳು ಯಾಕೆ ಜೀವಂತಿಕೆಯನ್ನು ಕಳೆದುಕೊಂಡವು? ಆ ಹಿರಿಯ ಕ್ರಾಂತಿಕಾರಿಯ ಚೈತನ್ಯ ಈಗ ಇಲ್ಲ. ನಮ್ಮ ಸೀಮಿತ ಗುರಿಯನ್ನು ನಾವೀಗಾಗಲೇ ತಲುಪಿರುವುದರಿಂದ ಈ ಎಲ್ಲ ಸಂಗತಿಗಳೂ ನಮಗಿಂದು ಬೇಕಾಗಿಲ್ಲ. ನಾವೀಗ ಈ ಎಲ್ಲ ಆಚರಣೆಗಳನ್ನೂ ಮುಪ್ಪಿನ ಗರತಿಯನ್ನಾಗಿ ಮಾಡುವುದು ಬೇಡ. ಕ್ರಾಂತಿಕಾರಿಗಳಾಗಿದ್ದ ನಾವು ಈಗ ಸುಧಾರಕರಾಗಿ ಬದಲಾಗಬಾರದು.

ಸ್ವದೇಶಿ ಚಳುವಳಿಯ ಸಂದರ್ಭದಲ್ಲಿ ದೇಶದ ಆರ್ಥಿಕ ಬೆಳವಣಿಗೆ ನಮ್ಮ ಗುರಿಯಾಗಿತ್ತು. ಅದು ತಕ್ಷಣ ಜನರ ಗಮನ ಸೆಳೆಯಲಿಲ್ಲ. ಆದರೆ ಯಾವಾಗ ಬ್ರಿಟಿಷರನ್ನು ಇಲ್ಲಿಂದ ಓಡಿಸುವುದಕ್ಕೆ ಅದನ್ನು ತಳುಕು ಹಾಕಲಾಯಿತೋ ಆಗ ಇಡೀ ದೇಶಕ್ಕೆ ದೇಶವೇ ಸ್ವದೇಶಿ ಚಳುವಳಿಯ ಕಾವೇರಿಸಿಕೊಂಡಿತು. ಈಗ ಬ್ರಿಟಿಷರಿಲ್ಲ.


ನೀವೀಗ ಕ್ರಾಂತಿಯನ್ನು ಇಂದಿನ ಬೆಳಕಿನಲ್ಲಿ ಮರು ಅರ್ಥೈಸಬೇಕಾಗಿದೆ.

ವಿಕೇಂದ್ರೀಕರಣದ ಹೊರತು ಪ್ರಜಾಪ್ರಭುತ್ವ ಒಂದು ಮಿಥ್ಯೆ. ಕೇಂದ್ರೀಕರಣ ಅಧಿಕಾರ ಶಾಹಿಯನ್ನು ಬೆಳೆಸುತ್ತದೆ. ಅಧಿಕಾರ ಶಾಹಿ ಮತ್ತು ತಾಂತ್ರಿಕ ಶಾಹಿ ಎರಡೂ ಪ್ರಜಾಪ್ರಭುತ್ವದ ವಿರೋಧಿಗಳು. ಎಲ್ಲಿ ಪ್ರಜಾಪ್ರಭುತ್ವ ಇರುವುದಿಲ್ಲವೋ ಅಲ್ಲಿ ಅಹಿಂಸೆ ಇರುವುದಿಲ್ಲ. ನಾವು ಜವಹರಲಾಲ್ ನೆಹರೂಗೆ ಹೇಳಬೇಕು; "ನಿಮಗೆ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ಆಸಕ್ತಿ ಇದ್ದರೆ ನೀವು ರೂಪಿಸಲು ಹೊರಟಿರುವ ಕೇಂದ್ರೀಕರಣವನ್ನು ಕೈ ಬಿಡಬೇಕು" ಎಂದು.

ಇನ್ನೊಂದು ವಿಷಯ ನಮ್ಮ ದೇಶದಲ್ಲಿ ಪ್ರತಿಯೊಬ್ಬನೂ ತನ್ನ ಸ್ವಂತಕ್ಕೆ ಚೆನ್ನಾಗಿಯೇ ಕೆಲಸಮಾಡುತ್ತಾನೆ. ಆದರೆ ಒಟ್ಟಾಗಿ ಸೇರಿ ಕೆಲಸ ಮಾಡುವ ಕಲೆಯನ್ನು ರೂಢಿಸಿಕೊಂಡಿಲ್ಲ. ಕುಮಾರಪ್ಪ, ಜಾಜೂಜಿ, ನಾಯಕ್‌ಜಿ ಇವರೆಲ್ಲ ಸರ್ವಾಧಿಕಾರಿ ರೀತಿಯ ಜನ. ಅವರ ಕಛೇರಿಯಲ್ಲಿ ಅವರ ಸಮ್ಮುಖದಲ್ಲಿ ಒಂದು ಲಘುವಾದ ಮಾತನ್ನೂ ಆಡುವಂತಿಲ್ಲ. ನಾವು ಒಬ್ಬರಿಗೊಬ್ಬರು ಸೇರಿಕೊಂಡು ಕೆಲಸ ಮಾಡುವ ಕಲೆಯನ್ನು ಕಲಿಯಬೇಕು. ಅನ್ಯರನ್ನು ನಾವು ಸೌಹಾರ್ದಯುತವಾಗಿ ಅಪ್ಪಿಕೊಳ್ಳಬೇಕು. ಆದರೆ ನಮ್ಮ ಸಹೋದ್ಯೋಗಿಗಳ ಜೊತೆಗೇ ದಿನ ಕಳೆಯುವುದಕ್ಕೂ ನಾವು ತಯಾರಿಲ್ಲ. ಗಾಂಧೀಜಿ ಮಾಡಿದ ಬಹಳ ದೊಡ್ಡ ತಪ್ಪೆಂದರೆ ನಮ್ಮ ಶತ್ರುಗಳನ್ನೂ ನಾವು ಪ್ರೀತಿಸುವಂತೆ ಹೇಳಿದ್ದು. ಆದರೆ ನಾವು ನಮ್ಮ ಸಹೋದರರನ್ನೇ ಪ್ರೀತಿಸುತ್ತಿಲ್ಲ. ನಾನು ಕೂಡ ತಪ್ಪಿತಸ್ಥ. ನನಗೆ ನಿಕಟವಾದವರನ್ನು ನಾನು ಪ್ರೀತಿಸಲಿಲ್ಲ.

ರಚನಾತ್ಮಕ ಒಕ್ಕೂಟಗಳ ಸಂಚಾಲಕರು ಒಬ್ಬರಿಗೊಬ್ಬರು ಸಂಪರ್ಕದಲ್ಲಿ ಬಂದರೆಂದರೆ ನಮ್ಮೆಲ್ಲರ ನಡುವೆ ಪರಸ್ಪರ ಪ್ರೀತಿ, ಸಹಕಾರ ಖಂಡಿತಾ ಸ್ಥಾಪಿತವಾಗುತ್ತದೆ. ಈ ಹೊಸ ಸಂಘ ನಮ್ಮ ಭ್ರಾತೃತ್ವಕ್ಕೆ ಕಾರಣವಾಗಲಿ.

ಸಾಭಾರ : ಗಾಂಧಿ ಹೋದರು : ನಮಗೀಗ ದಿಕ್ಕು ತೋರುವವರು ಯಾರು?
ಸಂಪಾದನೆ : ಗೋಪಾಲಕೃಷ್ಣ ಗಾಂಧಿ
ಕನ್ನಡಕ್ಕೆ : ಚಂದ್ರಶೇಖರ ತಾಳ್ಯ



ಅಬ್ದುಲ್ ಕಲಾಂ ಬಗೆ ಮರುಕಳಿಸಿದ ನೆನಪುಗಳು

ನಿರೂಪಣೆ : ಸಿ.ಆರ್.ಸತ್ಯ ಬರಹ: ಅನಿಲ್‌ಕುಮಾರ್ ಮೊಳಹಳ್ಳಿ

ಇತ್ತೀಚೆಗೆ(ಜುಲೈ ೨೭) ಇಹಲೋಕ ತ್ಯಜಿಸಿದ ಅಬ್ದುಲ್ ಕಲಾಂ ಒಂದು ರೀತಿಯ ದಾಖಲೆಯನ್ನು ಸೃಷ್ಟಿಸಿದ್ದಾರೆ ಎನ್ನಬಹುದು. ಒಬ್ಬ ಉಪನ್ಯಾಸಕನಾಗಿದ್ದ ಅವರನ್ನು ಕಳೆದುಕೊಂಡವರು ಒಬ್ಬರಲ್ಲ, ಇಬ್ಬರಲ್ಲ, ಲಕ್ಷಾಂತರ ವಿದ್ಯಾರ್ಥಿಗಳು. ಅವರ ಅಗಲಿಕೆಯಿಂದ ಮೂರು ವರ್ಷದ ಮಕ್ಕಳಿಂದ ಹಿಡಿದು ಕಾಲೇಜು, ಸ್ನಾತಕೋತ್ತರ ಮಟ್ಟದ ವಿದ್ಯಾರ್ಥಿಗಳೂ ಕಂಬನಿಯಿಟ್ಟಿದ್ದಾರೆ. ಇಷ್ಟು ವ್ಯಾಪ್ತಿಯಿರುವ ಶಿಷ್ಯಕೋಟಿಯನ್ನು ಪಡೆಯಲು ಒಬ್ಬ ವ್ಯಕ್ತಿಗೆ ಸಾಧ್ಯವೇ ಎಂದು ಆಶ್ಚರ್ಯವಾಗುತ್ತದೆ. ಆದರೆ ಅವರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಅವರ ಅಂತರಂಗದ ಗುಣಲಕ್ಷಣವೇ ಆಗಿದೆ ಎಂದು ತಿಳಿಯುತ್ತದೆ.

ರಾಮೇಶ್ವರದ ಒಬ್ಬ ಸಾಮಾನ್ಯ ಮೀನುಗಾರರ ಕುಟುಂಬದಲ್ಲಿ ಹುಟ್ಟಿದ ಅವರು ಉನ್ನತ ಶಿಕ್ಷಣವನ್ನು ಪಡೆದು ದೇಶದ ರಾಕೆಟ್, ರಕ್ಷಣಾ ತಂತ್ರಜ್ಞಾನಗಳಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದರು. ಕೊನೆಗೆ ರಾಷ್ಟ್ರಪತಿ ಪಟ್ಟವನ್ನೂ ಅಲಂಕರಿಸಿದರು. ಅವರು ಕೊನೆಯಲ್ಲಿ ರಾಷ್ಟ್ರಪತಿ ಭವನದಿಂದ ನಿವೃತ್ತರಾಗಿ ಹೊರಗೆ ಹೊರಟಿದ್ದು ಉಪನ್ಯಾಸಕರಾಗಿಯೇ. ಅದರಲ್ಲೂ ಅವರು ಲಕ್ಷಾಂತರ ಚಿಕ್ಕ ಮಕ್ಕಳನ್ನು ಉದ್ದೇಶಿಸಿ ನೀಡುತ್ತಿದ್ದ ಹಿತವಚನಗಳು ಕೇಳಿದವರಿಗೆ ಬಹಳ ಉತ್ತೇಜನಕಾರಿಯೆನಿಸುತ್ತಿತ್ತು. ಅವರು ಅಸಂಖ್ಯಾತ ಶಾಲೆ, ಕಾಲೇಜುಗಳಿಗೆ ಭೇಟಿ ನೀಡಿದ್ದರು. ಅಲ್ಲೆಲ್ಲ ಅವರು ಮಾಡುತ್ತಿದ್ದ ಉಪನ್ಯಾಸಗಳಲ್ಲಿ ಬಹಳ ಮುಖ್ಯವಾಗಿ ಹೇಳುತ್ತಿದ್ದುದು, "ನೀವು, ನಿಮ್ಮ ಚಿಮ್ಮುವ ಮನಸ್ಸನ್ನು ವ್ಯರ್ಥಮಾಡದಿರಿ, ಚೆನ್ನಾಗಿ ಉಪಯೋಗಿಸಿಕೊಳ್ಳಿ; ಮತ್ತು ಸ್ವಚ್ಛ ಭೂಮಿ, ಪರಿಸರಕ್ಕೆ ನಿಮ್ಮ ಶ್ರಮವೂ ಇರಲಿ. ರಾಷ್ಟ್ರಧ್ವಜ ನಿಮ್ಮ ಹೃದಯದಲ್ಲಿ ಎಂದೂ ಹಾರುತ್ತಿರಲಿ. ದೇಶದ ಅಭಿವೃದ್ಧಿಗೆ, ಅಭ್ಯುದಯಕ್ಕೆ ಮನಸಾರೆ ದುಡಿಯುತ್ತಿರಿ"– ಎಂದು. ಇದು ಅವರ ಮೂಲ ಸಂದೇಶವೇ ಆಗಿತ್ತು. ಹೀಗೆ ಹೇಳುತ್ತಿದ್ದ ಅವರಲ್ಲಿ ಯಾವ ರೀತಿಯ ಉತ್ಪ್ರೇಕ್ಷೆಯೂ ಕಾಣುತ್ತಿರಲಿಲ್ಲ. ಕಾರಣ ಅವರೇ ಈ ಮೌಲ್ಯಗಳಿಗೆ ರೂಪದರ್ಶಿಯಾಗಿದ್ದರು.

ತಮ್ಮ ಪ್ರೈಮರಿ, ಮಿಡ್ಲ್‌ಸ್ಕೂಲ್, ಕಾಲೇಜು ವಿದ್ಯಾಭ್ಯಾಸವನ್ನು ಬಹಳ ಬಡತನದಲ್ಲಿಯೇ ನಡೆಸಿದರು. ಒಬ್ಬ ವೈಮಾನಿಕ ತಂತ್ರಜ್ಞಾನಿಯಾದವನು ಸ್ನಾತಕೋತ್ತರ ಪದವಿಯನ್ನು ಪಡೆಯಲು ಧನಸಹಾಯವಿಲ್ಲದೆ ಅವರ ಅಕ್ಕ ತಮ್ಮ ಒಡವೆಗಳನ್ನು ಒತ್ತೆ ಇಟ್ಟು ಇವರನ್ನು ಓದಿಸಿದರು. ತಂದೆ ಮತ್ತು ತಾಯಿ ಹಾಗೂ ವಿದ್ಯೆಯನ್ನು ಧಾರೆ ಎರೆದ ಶಿಕ್ಷಕರು – ಇವರ ಬಗ್ಗೆ ಕಲಾಂ ಅವರಿಗೆ ಅತೀವ ಗೌರವ, ಪ್ರೀತಿಯಿತ್ತು. ಅವರು ವಿದ್ಯಾರ್ಥಿಗಳ ಸಭೆಯ ಸಭಾಂಗಣದಲ್ಲಿ ಯಾವಾಗ ಬಂದರೂ ಸಭಾಂಗಣದಲ್ಲಿ ಒಂದು ರೋಚಕ ಅನುಭವವಾಗುತ್ತಿತ್ತು. ಕಿಕ್ಕಿರಿದ ಮಕ್ಕಳು 'ಕಲಾಂ ಅಜ್ಜ' ಎಂದು ಕೈಚಾಚಿ ಅವರನ್ನು ನೋಡಲು ಬರುತ್ತಿದ್ದರು. ಕಲಾಂ ಅವರ ನಡತೆ, ಮಾತಿನಲ್ಲಿದ್ದ ಪ್ರೀತಿ, ಅವರ ಸರಳತೆ, ಮಕ್ಕಳನ್ನು ಮಾತ್ರವಲ್ಲ ಪೋಷಕರನ್ನೂ ಸೇರಿದಂತೆ ಎಲ್ಲರನ್ನೂ ಸೂರೆಗೊಳ್ಳುತ್ತಿತ್ತು.

ಕಟ್ಟಂಕಾಫಿ, ಉನ್ನಿಅಪ್ಪಂ

ನನಗೆ ಕಲಾಂ ಅವರ ಪರಿಚಯ ೫೦ ವರ್ಷಗಳ ಹಿಂದಿನದ್ದು. ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆದುಕೊಂಡು, ಮುಂಬಯಿಯಲ್ಲಿ ಸ್ನಾತಕೋತ್ತರ ತರಬೇತಿ ಪಡೆದುಕೊಂಡಿದ್ದ ನನ್ನನ್ನು ಆಗತಾನೇ(೨ ವರ್ಷಗಳ ಹಿಂದೆ) ಸ್ಥಾಪನೆಗೊಂಡಿದ್ದ 'ತುಂಬಾ ರಾಕೆಟ್ ಉಡಾವಣೆ ಕೇಂದ್ರ'ಕ್ಕೆ ಒಬ್ಬ ರಾಕೆಟ್ ಇಂಜಿನಿಯರ್‌ನನ್ನಾಗಿ ನೇಮಿಸಿದ್ದರು. ೧೯೬೫ರ ಜುಲೈ ೩೧ರಂದು ನಾನು ತುಂಬಾದ ನಿರ್ದೇಶಕರಾಗಿದ್ದ ಕನ್ನಡದವರೇ ಆದ ಡಾ॥ ಎಚ್.ಜಿ.ಎಸ್.ಮೂರ್ತಿ ಅವರ ಕಚೇರಿಗೆ ಹೋದೆ. ಅವರು ಪಕ್ಕದಲ್ಲಿದ್ದ ಒಬ್ಬರಿಗೆ "ನಿಮ್ಮಲ್ಲಿ ಕೆಲಸ ಮಾಡಲು ಒಬ್ಬ ಯುವಕ ಬಂದಿದ್ದಾನೆ" ಎಂದರು. ಅವರು ತಕ್ಷಣ "ಬಹಳ ಸಂತೋಷ. ನನ್ನ ಹೆಸರು ಅಬ್ದುಲ್ ಕಲಾಂ ಅಂತ" ಎಂದು ಕೈಕುಲುಕಿ ಪರಿಚಯಿಸಿಕೊಂಡು ಒಬ್ಬ ಯುವ ಅನುಭವವಿಲ್ಲದ ಇಂಜಿನಿಯರ್‌ನನ್ನು ತಮ್ಮ ವಿಭಾಗಕ್ಕೆ ಸೇರಿಸಿಕೊಂಡರು. ಅಂದಿನಿಂದ ಈ ೫೦ ವರ್ಷಗಳವರೆಗೂ ಅವರ ಸ್ನೇಹ ಬೆಳೆದುಕೊಂಡು ಬಂದಿದೆ. ಹಾಗಾಗಿ, ಅವರೊಡನೆ ಆದ ಒಡನಾಟದಿಂದಾಗಿ ಅವರ ತಾಂತ್ರಿಕ ಕೌಶಲಗಳ ಹಾಗೂ ಅವರ ಕಾರ್ಯ, ರೀತಿ–ನೀತಿಗಳ ಅನನ್ಯತೆ ನನಗೆ ನಿಧಾನವಾಗಿ ಹಂತಹಂತವಾಗಿ ಅರಿವಾಯಿತು.

ತಿರುವನಂತಪುರದಲ್ಲಿ ಆಗ ಬ್ರಹ್ಮಚಾರಿಗಳಾಗಿದ್ದ ನಾವು ಕೆಲವರು ಕಲಾಂ ಜತೆ ಒಂದೇ ಲಾಡ್ಜ್‌ನಲ್ಲಿ ವಾಸಮಾಡುತ್ತಿದ್ದೆವು. ಆದರೆ ಆ ಲಾಡ್ಜ್ ಏನಿದ್ದರೂ ನಮಗೆ ರಾತ್ರಿ ಬಂದು ಮಲಗುವುದಕ್ಕೆ ಮಾತ್ರ ಸೀಮಿತವಾಗಿತ್ತು. ಬೆಳಗ್ಗೆಯಿಂದ ರಾತ್ರಿಯವರೆಗೂ ನಮ್ಮ ದಿನಗಳನ್ನೆಲ್ಲಾ ಆಫೀಸ್‌ನಲ್ಲೇ ಕಳೆಯಬೇಕಿತ್ತು. ಯಾಕೆಂದರೆ ಕಲಾಂಅವರ ಜೊತೆ ಕೆಲಸ ಮಾಡುವುದು ಬಹು ಕಷ್ಟಕರವೇ ಆಗಿತ್ತು! ಬೇರೆ ಯಾವ ಯೋಚನೆಯೂ ಇಲ್ಲದೆ ಅವರು ದಿನದ ೧೨ರಿಂದ ೧೪ಗಂಟೆಗಳ ಕಾಲ ಕೆಲಸದಲ್ಲೇ ತೊಡಗಿಸಿಕೊಂಡಿರುತ್ತಿದ್ದರು. ಅವರ ಕೆಲಸದ ಭರ ಹೇಗಿತ್ತೆಂದರೆ, ಕೆಲವರು

ಮದುವೆಮಾಡಿಕೊಂಡ ಮೇಲೆ ಅವರ ಹೆಂಡತಿಯರು ಅವರೊಂದಿಗೆ ಜಗಳವಾಡಲು ಪ್ರಾರಂಭಿಸಿದ್ದರು – 'ದಯವಿಟ್ಟು, ನೀವು ಇನ್ನು ಕಲಾಂಅವರ ಜೊತೆ ಕೆಲಸಮಾಡಬೇಡಿ, ಬೇರೆ ಯಾವುದಾದರೂ ವಿಭಾಗ–ಕ್ಕೆ ಹೋಗಿ' ಎಂದು! ರಜಾದಿನಗಳ ಪರಿವೆಯೇ ಇಲ್ಲದಿದ್ದ ನಮಗೆ ತಲೆ ಕ್ಷೌರಕ್ಕೂ ಸಮಯವಿಲ್ಲದಹಾಗಾಗುತ್ತಿತ್ತು! ಅಂದು ತುಂಬಾದಲ್ಲಿ ಇತ್ತೀಚೆಗೆ ನಮಗೆ ಕಂಡುಬರುವ ಅತ್ಯಾಧುನಿಕ ಸೌಲಭ್ಯಗಳು ಯಾವುದೂ ಇರಲಿಲ್ಲ. ಕಟ್ಟಂಕಾಕಾಫಿ, ಉನ್ನಿಅಪ್ಪಂ, ಬೇಯಿಸಿದ ನೇಂದ್ರಬಾಳೆಹಣ್ಣು – ಇವೇ ನಮ್ಮ ದಿನನಿತ್ಯದ ಆಹಾರ! ಆಗಿದ್ದ ಆಡಳಿತ ಕಛೇರಿ – ಬೆಸ್ತರು ನಮಗೆ ಬಿಟ್ಟುಕೊಟ್ಟಿದ್ದ ಪೂಜಾವಿಧಿ ಇಲ್ಲದಿದ್ದ ಒಂದು ಚರ್ಚ್! ನಮ್ಮೆಲ್ಲರ ಕಾರ್ಯಾಗಾರಗಳು ಬೆಸ್ತರ ಮನೆಗಳೇ!

ಕರ್ಮಯೋಗಿ

ಕಲಾಂ ಅವರ ಕೆಲಸದ ವೈಖರಿಯನ್ನು ಕುರಿತು ಕೆಲವು ಉದಾಹರಣೆಗಳನ್ನು ನೆನಪಿಸಿಕೊಳ್ಳಬಹುದಾದರೆ: ಬಹುಶಃ ಇದು ಯಾವ ಸಂಸ್ಥೆಯಲ್ಲೂ ನಡೆದಿಲ್ಲವೆನಿಸುತ್ತದೆ! ಅಹಮದಾಬಾದ್‌ನಲ್ಲಿ ವಿಕ್ರಮ್ ಸಾರಾಭಾಯಿ ಅವರು ನಡೆಸುತ್ತಿದ್ದ ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿ(ಭೌತಶಾಸ್ತ್ರ ಅಧ್ಯಯನ ಕೇಂದ್ರ) ಯಿಂದ ಹಲವು ಮಂದಿ ವಿಜ್ಞಾನಿಗಳು 'ತುಂಬಾ ರಾಕೆಟ್ ನಿಲ್ದಾಣ'ಕ್ಕೆ ಬರುತ್ತಿದ್ದರು. ಆಗ ಭಾರತದಲ್ಲೇ ವಿನ್ಯಾಸಗೊಳಿಸಿ ತಯಾರಾಗಿದ್ದ ರಾಕೆಟ್‌ಗಳು ನಮ್ಮಲ್ಲಿ ಇರಲಿಲ್ಲ. ಸಂಯುಕ್ತ ರಾಷ್ಟ್ರದ ವತಿಯಿಂದ, ಅಮೆರಿಕ, ಬ್ರಿಟನ್, ರಷ್ಯಾ, ಫ್ರಾನ್ಸ್‌ಗಳಿಂದ ರಾಕೆಟ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ನಮ್ಮ ಕೆಲಸ: ವೈಜ್ಞಾನಿಕ ಸಂಶೋಧನೆಗೆ ಬೇಕಾದ ಸಲಕರಣೆಗಳನ್ನು, ಎಲೆಕ್ಟ್ರಾನಿಕ್ಸ್, ನಾನಾ ಉಪವ್ಯವಸ್ಥೆಗಳಿದ್ದ ರಾಕೆಟ್‌ನ ಮೂತಿ(ನೋಸ್‌ಕೋನ್) ಇತ್ಯಾದಿಗಳನ್ನು ರಾಕೆಟ್ ಜೊತೆ ಜೋಡಿಸುವುದು, ಅವುಗಳ ಗುಣಮಟ್ಟ ಪರೀಕ್ಷೆಮಾಡುವುದು, ಆ ಜೋಡಣೆಗೆ ಅಗತ್ಯವಾದ ಸಾಮಗ್ರಿಗಳನ್ನು ನಾವೇ ವಿನ್ಯಾಸಮಾಡಿ, ನಿರ್ಮಿಸಿ ರಾಕೆಟನ್ನು ಉಡಾವಣೆಮಾಡುವುದು. ಹೀಗಾಗಿ ನಮ್ಮ ತಾಂತ್ರಿಕ ಸಹಾಯದೊಂದಿಗೆ ಒಬ್ಬೊಬ್ಬ ವಿಜ್ಞಾನಿಯೂ ಒಂದೊಂದು ರೀತಿಯ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುತ್ತಿದ್ದರು. ಇವುಗಳು ಸಾಧಾರಣವಾಗಿ ಭೂಮಿಯ ವಾತಾವರಣದ ಬಗ್ಗೆ ಹಾಗೂ ಹೊರವಾತಾವರಣದಲ್ಲಿ ಸೂರ್ಯನಿಂದ ಬರುವ ವಿಕಿರಣಗಳ ಕುರಿತದ್ದಾಗಿತ್ತು.

ಒಮ್ಮೆ ಯು.ಆರ್.ರಾವ್(ನಂತರ ಇವರು ಇಸ್ರೋದ ಅಧ್ಯಕ್ಷರಾದರು) ಅವರು ಅಹಮದಾಬಾದ್‌ನ ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿ ಭೌತಶಾಸ್ತ್ರ ವಿಜ್ಞಾನಿಯಾಗಿ ತುಂಬಾಕ್ಕೆ ಬಂದಿದ್ದರು. ಅವರ ಪ್ರಯೋಗ ಯಾವ ರೀತಿ ಇತ್ತೆಂದರೆ ಒಂದು ನಿರ್ದಿಷ್ಟ ದಿನ, ಒಂದು ನಿರ್ದಿಷ್ಟ ಸಮಯದಲ್ಲೇ ಆ ರಾಕೆಟ್ ಉಡಾವಣೆ ಆಗಬೇಕಿತ್ತು! ಆದರೆ ಆ ಗುರಿ ಮುಟ್ಟಲು ನಮಗೆ ಬಹಳ ಕಷ್ಟವಾಗುತ್ತಿತ್ತು. ಕೊನೆಕೊನೆಗೆ ರಾಕೆಟ್ ಉಡಾವಣಾ ದಿನ ಹತ್ತಿರ ಬರುತ್ತಿದ್ದಂತೆ ಕೆಲಸದ ಒತ್ತಡ ಅಧಿಕವಾಯಿತು.

ಅಬ್ದುಲ್ ಕಲಾಂ, ಮಾಧವನ್ ನಾಯರ್, ನಾನು ಹಾಗೂ ಇನ್ನೊಬ್ಬರು – ನಾವು ನಾಲ್ಕೈದು ದಿನ ನಿದ್ದೆ, ಆಹಾರ ಒಂದೂ ಇಲ್ಲದೆ ಬೆಳಗ್ಗಿನಿಂದ ರಾತ್ರಿತನಕ ದುಡಿದು ಸರಿಯಾದ ಆಹಾರವಿಲ್ಲದೆ ನಿಶ್ಶಕ್ತಿಯಿಂದ ಕೆಲಸಮಾಡುತ್ತಿದ್ದೆವು. ಅದೇ ಸಮಯದಲ್ಲಿ ಆಗಿನ ತುಂಬಾದ ನಿರ್ದೇಶಕರಾಗಿದ್ದ ಮೂರ್ತಿಅವರು ಕೊಚ್ಚಿನ್‌ನಿಂದ ತಿರುವನಂತಪುರಕ್ಕೆ ರಸ್ತೆಯಲ್ಲಿ ಹಾಯ್ದುಹೋಗುತ್ತಿದ್ದರು. ಸುಮಾರು ಬೆಳಗ್ಗಿನ ಜಾವ ಮೂರುಗಂಟೆ. ನಮ್ಮ ಪ್ರಯೋಗಶಾಲೆಯಲ್ಲಿ ಅಷ್ಟೊಂದು ದೀಪಗಳು ಉರಿಯುತ್ತಿರುವುದನ್ನು ನೋಡಿ, 'ಯಾರು ಕೆಲಸಮಾಡುತ್ತಿದ್ದಾರೆ?' ಎಂದು ಸೆಕ್ಯುರಿಟಿಯನ್ನು ವಿಚಾರಿಸಿದರು. ಆತ, 'ಕಲಾಂ ಮತ್ತು ಅವರ ಶಿಷ್ಯರು' ಎಂದು ಉತ್ತರಿಸಿದ. ಅವರು ನೇರವಾಗಿ ಒಳಗೆ ಬಂದು ನಾವಿದ್ದ ಸ್ಥಿತಿಯನ್ನು, ತ್ರಾಣವಿಲ್ಲದೇ ನಿಂತಿದ್ದ ನಮ್ಮೆಲ್ಲರನ್ನೂ ಕಂಡು ಕೋಪಗೊಂಡು ಸಿಟ್ಟಾದರು. "ಕಲಾಂ, ಈ ರೀತಿ ಕೆಲಸ ಮಾಡುವುದು ನನಗೆ ಇಷ್ಟವಿಲ್ಲ. ಇನ್ನು ೫ನಿಮಿಷಗಳ ಕಾಲ ನಿಮಗೆಲ್ಲ ಸಮಯ ಕೊಡುತ್ತೇನೆ. ನಿಮ್ಮ ಕೆಲಸವನ್ನೆಲ್ಲ ನಿಲ್ಲಿಸಿ, ನಿಮ್ಮ ಶಿಷ್ಯರನ್ನು ಕಟ್ಟಿಕೊಂಡು, ಪ್ರಯೋಗಶಾಲೆಯ ಬಾಗಿಲುಹಾಕಿಕೊಂಡು ತಿರುವನಂತಪುರದ ನಿಮ್ಮ ವಿರಾಮ ಸ್ಥಳಕ್ಕೆ ಹೋಗಿ. ಮತ್ತೆ ನಾಳೆ ಪೂರ್ತಿದಿನ ನನಗೆ ಮುಖ ತೋರಿಸಬೇಡಿ. ಪೂರ್ಣವಾಗಿ, ಆರಾಮವಾಗಿ ರೆಸ್ಟ್ ತೆಗೆದುಕೊಂಡು ನಾಡಿದ್ದುಮಾತ್ರ ನೀವು ಬರಬೇಕು. ಅದಕ್ಕೆ ಮುಂಚೆ ನೀವೇನಾದರೂ ಬಂದರೆ, ನಾನು ಸೆಕ್ಯುರಿಟಿಯವರಲ್ಲಿ ಹೇಳಿ ನಿಮ್ಮನ್ನು ಇಲ್ಲಿಂದ ಹೊರಗೆ ದಬ್ಬಿಸಿಬಿಡುತ್ತೇನೆ" ಎಂದರು. ತಮಾಷೆ ಅಂದರೆ ಕಲಾಂ "ಆಗಲಿ ಸರ್, ಹಾಗೆಯೇ ಮಾಡುತ್ತೇನೆ" ಎಂದರು. ಅವರು ಆಕಡೆ ಹೊರಟನಂತರ ನಮ್ಮ ಕಡೆ ತಿರುಗಿ "ಏನು ಮಾಡೋಣ? ಇವರು ಕೆಲಸಮಾಡಬೇಡಿ ಅನ್ನುತ್ತಿದ್ದಾರಲ್ಲ! ಸರಿ. ಹೋಗೋಣ, ಬನ್ನಿ. ಇನ್ನೊಂದು ಎರಡು ಗಂಟೆ ಬಿಟ್ಟುಕೊಂಡು ವಾಪಾಸ್ ಬಂದುಬಿಡೋಣವಾ?" ಎಂದರು. ಕೊನೆಗೆ ನಾವು ಮಾಡಿದ್ದೂ ಹಾಗೆಯೆ! ಹೇಗೋ ಆ ನಿರ್ದಿಷ್ಟ ಸಮಯಕ್ಕೆ ಆ ರಾಕೆಟ್ ಮೇಲಕ್ಕೆ ಹೋಯಿತು!

ಇನ್ನೊಂದು ಬಾರಿ, ಅಲ್ಲಿನ ಆಗಿನ ನಿರ್ದೇಶಕರಾಗಿದ್ದ ಎಚ್.ಜಿ.ಎಸ್.ಮೂರ್ತಿ ಅವರ ಕೊಠಡಿಗೆ ಒಬ್ಬ ವೃದ್ಧರುಬಂದು ಕುಳಿತುಕೊಂಡು ಕಣ್ಣಲ್ಲಿ ನೀರುಸುರಿಸಲಾರಂಭಿಸಿದರು. ಮೂರ್ತಿಅವರು "ಯಾರು ನೀವು? ಏಕೆ ಬಂದಿರಿ" ಎಂದು ವಿಚಾರಿಸಿದರು. "ನಾನು ನಿಮ್ಮಲ್ಲೊಬ್ಬ ಕೆಲಸಮಾಡುತ್ತಿದ್ದಾರೆ ನೋಡಿ, ಅಬ್ದುಲ್ ಕಲಾಂಅಂತ, ಅವರ ತಂದೆ. ರಾಮೇಶ್ವರದಿಂದ ಬಂದಿದ್ದೇನೆ. ಏನು ನೀವು ಅವನನ್ನು ಬಂಧನದಲ್ಲಿಟ್ಟುಕೊಂಡಿದ್ದೀರಾ? ಆತ ನಮ್ಮ ಮನೆಕಡೆಯೇ ಬರುತ್ತಿಲ್ಲ. ಕಾಗದವನ್ನೂ ಬರೆಯುತ್ತಿಲ್ಲ, ಮಾತನಾಡುತ್ತಿಲ್ಲ. ನಮಗೆ ಬಹಳ ಆತಂಕ ಆಗಿಬಿಟ್ಟಿದೆ. ಏನು ಕೆಲಸ ಅವನುಮಾಡುತ್ತಿರುವುದು?" ಎಂದರು ದುಃಖದಿಂದ. ಇದನ್ನು ಕೇಳಿ ಮೂರ್ತಿಅವರ ಹೃದಯ ಕಲಕಿರಬೇಕು. ಅವರು ತಕ್ಷಣ ಕಲಾಂರನ್ನು ಒಳಕ್ಕೆ ಕರೆದು "ಕಲಾಂ, ಏನಿದು? ಈ ವೃದ್ಧರು ರಾಮೇಶ್ವರದಿಂದ ನಿಮ್ಮನ್ನು ಹುಡುಕಿಕೊಂಡು ಇಲ್ಲಿಗೆ ಬಂದು

ಹೀಗೆ ಹೇಳುತ್ತಿರಬೇಕಾದರೆ, ಏನು ಮನೆಕಡೆ ಗಮನವನ್ನೇ ಕೊಡುತ್ತಿಲ್ಲವೇ? ದಯವಿಟ್ಟು ಈಗಲೇ ಇವರನ್ನು ತಿರುವನಂತಪುರ(ತುಂಬಾ ರಾಕೆಟ್ ನಿಲ್ದಾಣದಿಂದ ಸುಮಾರು ೧೫ಕಿ.ಮೀ.ದೂರದಲ್ಲಿದೆ)ಕ್ಕೆ ಕರೆದುಕೊಂಡು ಹೋಗಿ, ಚೆನ್ನಾಗಿ ನೋಡಿಕೊಂಡು, ಅವರ ಜೊತೆ ನೀವೂ ಬಸ್ ಹತ್ತಿ ಮಧುರೈತನಕ ಹೋಗಿ. ಮಧುರೈ-ರಾಮೇಶ್ವರ ಬಸ್‌ನಲ್ಲಿ ಕೂರಿಸಿ ವಾಪಾಸ್ ಬನ್ನಿ" ಎಂದರು. ಕಲಾಂಅವರನ್ನು ಕರೆದುಕೊಂಡೇನೋ ಹೋದರು. ಆದರೆ ಇನ್ನೆರಡು ಗಂಟೆಗಳ ಕಾಲದಲ್ಲೇ ಆಫೀಸ್‌ನಲ್ಲಿ ಹಾಜರಾದರು! ಅವರ ತಂದೆಯವರನ್ನು ಹೇಗೆ ಕಳುಹಿಸಿದರೋ ಏನೋ ಯಾರಿಗೂ ಗೊತ್ತಿಲ್ಲ!

"ಕಲಾಂ, ಹುಲಿಹಾಲು ಕರೆಯಬಲ್ಲ!"

ಅವರ ತಾಂತ್ರಿಕಜ್ಞಾನ ವೃದ್ಧಿಯಾಗಿದ್ದೂ ನಾನಾ ರೀತಿಯಲ್ಲಿ. ಎಲ್ಲಕ್ಕಿಂತ ಮುಖ್ಯವಾಗಿ ಅವರ ಹಿರಿಯ ಅಧಿಕಾರಿಗಳಿಂದ ಪಡೆಯುತ್ತಿದ್ದ ಪ್ರೇರಣೆ ಒಂದಾದರೆ, ಅವರ ಕೆಳಗೆ ಕೆಲಸಮಾಡುವ ನಮ್ಮಂಥವರಿಗೂ ಅವರು ಎಲ್ಲ ರೀತಿಯ ಪ್ರೋತ್ಸಾಹನೀಡಿ, ನಾವು ಎಷ್ಟು ಚಿಕ್ಕ ಕೆಲಸ ಅಥವಾ ದೊಡ್ಡ ಕೆಲಸವನ್ನೇ ಮಾಡಲಿ ಉತ್ತೇಜನ ನೀಡಿ ಮೇಲಕ್ಕೆ ತರುತ್ತಿದ್ದರು. ಇನ್ನೊಬ್ಬರಿಂದ ಕೆಲಸತೆಗೆಯುವುದು ಹೇಗೆ ಎಂಬ ಚಾಣಾಕ್ಷತೆ ಅವರಿಗಿತ್ತು. ಅದು ಒಬ್ಬ ಲಿಫ್ಟ್ ಆಪರೇಟರ್ ಅಥವಾ ಡ್ರೈವರ್ ಇರಬಹುದು, ಒಬ್ಬದೊಡ್ಡ ಅಧಿಕಾರಿ ಅಥವಾ ಇಂಜಿನಿಯರ್ ಇರಬಹುದು. ಇಂತಹವರನ್ನೆಲ್ಲ ಗುಂಪುಗೂಡಿಸಿ, ಎಲ್ಲರ ಶಕ್ತಿಯನ್ನೂ ಒಂದುಗೂಡಿಸಿ ಕಾರ್ಯಸಫಲತೆಯನ್ನು ಹೊರತರಿಸುತ್ತಿದ್ದರು. ಇದನ್ನು ಗಮನಿಸಿದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಪ್ರಸಿದ್ಧ ವಿಜ್ಞಾನಿಯಾಗಿದ್ದ ಡಾ.ಎಸ್.ರಾಮಶೇಷನ್ "ಕಲಾಂ ಕೆನ್ ಮಿಲ್ಕ್ ಈವನ್ ಏ ಟೈಗರ್" ಎಂದಿದ್ದರು!

ಸುಮಾರು ೧೯೬೦ರ ಕೊನೆಯ ದಿನಗಳು. ನಮ್ಮಲ್ಲಿ ರಾಕೆಟ್ ತಂತ್ರಜ್ಞಾನಕ್ಕೆ ಅಗತ್ಯವಾದ ಕಚ್ಚಾವಸ್ತುಗಳಾಗಲೀ ವಿಶಿಷ್ಟ ಯಂತ್ರ, ಸಲಕರಣೆಗಳಾಗಲೀ ಭಾರತದಲ್ಲಿ ಉತ್ಪಾದಿಸುತ್ತಿರಲಿಲ್ಲ. ರಾಜಕೀಯ ಒತ್ತಡದಿಂದಾಗಿ ಅಮೆರಿಕ, ಯೂರೋಪ್ ದೇಶಗಳೂ ನಮಗೆ ಈ ತಂತ್ರಜ್ಞಾನದ ಕುರಿತು ಯಾವ ರೀತಿಯ ಸಹಾಯವನ್ನೂ ಮಾಡುತ್ತಿರಲಿಲ್ಲ. ಈಗಿನ ಹಾಗೆ ಅಂದು ಈ ತಂತ್ರಜ್ಞಾನವನ್ನು ಪಡೆದಿದ್ದ ಮುಂದುವರಿದ ದೇಶಗಳ ಜೊತೆ ಯಾವ ಸೌಹಾರ್ದಿಕ ಒಪ್ಪಂದಗಳೂ ಜಂಟಿಕಾರ್ಯಕ್ರಮಗಳೂ ಇರಲಿಲ್ಲ. ಹೀಗಾಗಿ ನಾವೇ ಎಲ್ಲವನ್ನೂ ಕಲಿತು ಸ್ಥಳೀಯವಾಗಿ ಅಭಿವೃದ್ಧಿಪಡಿಸಬೇಕಾಗಿತ್ತು. ಈ ಸಂದರ್ಭದಲ್ಲಿ ಕಲಾಂ ಅವರು ನನಗೊಂದು ಸೂಚನೆ ಕೊಟ್ಟರು – "ಈ ರಾಕೆಟ್‌ಗಳ ಪ್ರಮುಖ ಅಂಗಾಂಗಗಳನ್ನು ನಾವು ದೃಢೀಕರಿಸಿದ ಪ್ಲಾಸ್ಟಿಕ್(ಇದಕ್ಕೆ ಕಾಂಪೋಸಿಟ್ಸ್ ಅಥವಾ ಸಮ್ಮಿಶ್ರವಸ್ತುಗಳು ಎನ್ನುತ್ತಾರೆ) ನಿಂದ ಮಾಡಬೇಕು. ಈ ವಸ್ತುಗಳನ್ನು ತಯಾರಿಸಬೇಕಾದ ಯಂತ್ರವನ್ನು ಹೇಗೆ ಮಾಡಬೇಕೆಂದು ಯಾರಿಗೂ ಗೊತ್ತಿಲ್ಲ. ನೀವೇ ಇದರ ಬಗ್ಗೆ ಯೋಚನೆಮಾಡಿ" ಎಂದು. ಇಂತಹ ವಿಶಿಷ್ಟ ಯಂತ್ರವನ್ನು

ವಿನ್ಯಾಸಮಾಡಿ ಅದನ್ನು ನಿರ್ಮಿಸುವ ಕಾರ್ಯ ನನಗೆ ಬಹು ಕ್ಲಿಷ್ಟವಾಗಿ ತೋರಿತು. ಇಂತಹ ದೊಡ್ಡ ವಿನ್ಯಾಸಕಾರ್ಯವನ್ನು ನಾನು ಅದುವರೆಗೂಮಾಡಿರಲಿಲ್ಲ. ಹೀಗಾಗಿ ಘುಮ್ಮನೆ ಅದರ ಮೂಲ ಸಿದ್ಧಾಂತ ಏನಿದೆ ಎಂದು ಅರಿಯಲು, ಏನೋ ಕೈಗೆಸಿಕ್ಕಿದ ಕೆಲವು ಭಾಗಗಳನ್ನು ವರ್ಕ್‌ಶಾಪ್‌ಗೆ ತೆಗೆದುಕೊಂಡು ಹೋಗಿ ಒಂದು ಯಂತ್ರವನ್ನು ನಿರ್ಮಾಣ ಮಾಡಿದೆ. ಅದನ್ನು ಓಡಿಸಲು ಒಂದು ಎಲೆಕ್ಟ್ರಿಕ್ ಮೋಟಾರನ್ನು ಅಳವಡಿಸಬೇಕಿತ್ತು. ಅದು ಇಲ್ಲದಿದ್ದ ಕಾರಣದಿಂದ ಕೈನಲ್ಲೇ ತಿರುಗಿಸುವಂಥ ಒಂದು ರಾಟೆಯನ್ನು ವ್ಯವಸ್ಥೆ ಮಾಡಿದೆ! ಯಂತ್ರಗಳಲ್ಲಿ ಉಪಯೋಗಿಸುವ ಬೆಲ್ಟ್ ಬದಲು ತೆಂಗಿನನಾರಿನ ಹಗ್ಗ ಸುತ್ತಿದ್ದೆ! ಈ ವಿಚಿತ್ರ ಯಂತ್ರದ ಮಾದರಿಯನ್ನು ನಾನು ಕೈಯಲ್ಲೇ ತಿರುಗಿಸುತ್ತಿದ್ದಾಗ ಕಲಾಂ ಅವರು ಅಲ್ಲಿಗೆ ಬಂದರು. ಅವರು ಈ ವಿಚಿತ್ರ ದೃಶ್ಯವನ್ನು ನೋಡಿ ಏನನ್ನುತ್ತಾರೋ ಎಂದು ನನಗೋ ಎಲ್ಲಿಲ್ಲದ ನಾಚಿಕೆಯಾಯಿತು. ಆದರೆ ಅವರ ಪ್ರತಿಕ್ರಿಯೆಯೇ ಬೇರೆಯಾಗಿತ್ತು. ನನ್ನನ್ನು ತಬ್ಬಿಕೊಂಡು, "ಅಯ್ಯೋ, ಎಷ್ಟು ಚೆನ್ನಾಗಿ ಮಾಡಿದ್ದೀರಿ. ಇದನ್ನು ನಾನು ಡಾ.ವಿಕ್ರಮ್ ಸಾರಾಭಾಯಿ(ಭಾರತದ ಬಾಹ್ಯಾಕಾಶ ಸಂಶೋಧನೆಯ ಪಿತಾಮಹ ಎಂದೇ ಜನಜನಿತರಾದ ಇವರು ಅಂದು ಇಸ್ರೋದ ಅಧ್ಯಕ್ಷರಾಗಿದ್ದರು) ಅವರಿಗೆ ತೋರಿಸುತ್ತೇನೆ" ಎಂದರು. "ದಯವಿಟ್ಟು ಬೇಡ. ನೀವೇ ನೋಡಬಾರದು ಎಂದುಕೊಂಡಿದ್ದೆ. ಅಂತಹ ದೊಡ್ಡವರನ್ನು ಕರೆದುಕೊಂಡು ಬರುತ್ತೀರಲ್ಲಾ. ಬೇಡ" ಎಂದೆ. "ನೋ...ನೋ...ನೋ... ಅವರು ಇದನ್ನು ಖಂಡಿತವಾಗಿ ನೋಡಲೇಬೇಕು" ಎಂದು ಹಠಹಿಡಿದರು.

ಒಂದು ವಾರದ ನಂತರ ಕಲಾಂ ಅವರು ನನ್ನ ಯಂತ್ರವಿದ್ದ ಕೊಠಡಿಗೆ ಸಾರಾಭಾಯಿಯವರನ್ನು ಕರೆದುಕೊಂಡೇ ಬಂದರು. ನನಗೋ ನಾಚಿಕೆಯೋ ನಾಚಿಕೆ! ಸಾರಾಭಾಯಿ ಜೊತೆಗಿದ್ದ ಕೆಲವು ಹಿರಿಯರು ಜೋರಾಗಿ ನಕ್ಕುಬಿಟ್ಟರು. ಆದರೆ ಕಲಾಂ ಮತ್ತು ಸಾರಾಭಾಯಿ ಮಾತ್ರ ನಗಲಿಲ್ಲ. ಸಾರಾಭಾಯಿ ಅವರು ನನ್ನ ಹತ್ತಿರಕ್ಕೆ ಬಂದು, "ಏನ್ ಮಾಡುತ್ತಿದ್ದೀರಿ, ಯಾಕೆ ಹೀಗೆ ಮಾಡುತ್ತಿದ್ದೀರಿ?" ಎಂದೆಲ್ಲ ಪ್ರಶ್ನಿಸಿದರು. ನಾನು ವಿವರಿಸಿದೆ. ಅವರು ತಕ್ಷಣ ಕಲಾಂ ಕಡೆಗೆ ತಿರುಗಿ, "ಕಲಾಂ, ಸತ್ಯ ಅವರನ್ನು ಇಂಗ್ಲೆಂಡ್, ಯೂರೋಪ್ ಮತ್ತು ಅಮೆರಿಕಕ್ಕೆ ಒಡನೆಯೇ ಕಳುಹಿಸಿ. ಅಲ್ಲಿ ಕೆಲವು ಸಂಸ್ಥೆಗಳಲ್ಲಿ ಉದ್ಯಮಗಳಲ್ಲಿ ಈ ತಂತ್ರಜ್ಞಾನದ ಪರಿಣತರು ಅನೇಕರಿದ್ದಾರೆ. ಅವರಿಗೆ ನಾನು ಶಿಫಾರಸುಪತ್ರಗಳನ್ನು ಬರೆಯುತ್ತೇನೆ. ಅವರು ಅಲ್ಲಿಗೆ ಹೋಗಿ ಈ ಯಂತ್ರವನ್ನು ಹೇಗೆ ಇನ್ನಷ್ಟು ಚೆನ್ನಾಗಿ ಮಾಡಬಹುದು ಎಂಬುದನ್ನು ತಿಳಿದುಕೊಳ್ಳಬಹುದು" ಎಂದರು. ಕಲಾಂ 'ಸರಿ, ಸರ್' ಎಂದರು. ಆಗ ಮೊದಲು ನಗೆಯಾಡಿದ್ದ ಮಿಕ್ಕವರೆಲ್ಲ ತೆಪ್ಪಗಾದರು. ಭೇಟಿ ಮುಗಿಸಿ ಹೊರಗಡೆ ಹೋಗುತ್ತಿದ್ದ ಸಾರಾಭಾಯಿ ತಕ್ಷಣ ಹಿಂದಕ್ಕೆ ತಿರುಗಿಬಂದು, ಏನೋ ಯೋಚನೆ ಮಾಡಿ ಹೇಳಿದರು, "ನೋಡಿ, ೨ನೇ ಫೆಬ್ರವರಿ ೧೯೬೮ರಲ್ಲಿ ಈ ಉಡಾವಣಾಕೇಂದ್ರಕ್ಕೆ ಭಾರತದ ಪ್ರಧಾನಿ ಇಂದಿರಾಗಾಂಧಿ ಹಾಗೂ ಸಂಯುಕ್ತ ರಾಷ್ಟ್ರಗಳ ಹಲವು ಪ್ರಮುಖರೆಲ್ಲಾ ಬರುತ್ತಿದ್ದಾರೆ. ಅಂದು ಈ

ತುಂಬಾ ರಾಕೆಟ್ ನಿಲ್ದಾಣವನ್ನು ಸಂಯುಕ್ತ ರಾಷ್ಟ್ರಕ್ಕೆ ಅರ್ಪಣೆ ಮಾಡುತ್ತಿದ್ದೇವೆ. ಅಂದು ನೀವು ನಿಮ್ಮ ಅಂತಿಮ ರೂಪದ ಯಂತ್ರವನ್ನು ತಯಾರಿಸಿ ಇಟ್ಟಿದ್ದರೆ, ನಾನು ಪ್ರಧಾನಿ ಇಂದಿರಾಗಾಂಧಿ ಅವರಿಂದ ಇದರ ಸ್ವಿಚ್ ಆನ್ ಮಾಡಿಸುತ್ತೇನೆ" ಎಂದರು. ಅದೂ ಆಯಿತು. ೨ನೇ ಫೆಬ್ರುವರಿಯಂದು ಇಂದಿರಾಗಾಂಧಿ ಬಂದರು. ನನ್ನ ಹತ್ತಿರ ಬಂದಾಗ "ಈ ಯುವಕ ಇಂಜಿನಿಯರ್ ನಿಮಗಾಗಿ ಕಾಯುತ್ತಿದ್ದಾನೆ. ನೀವು ಅವರ ಹೊಸ ಮೆಷಿನ್‌ನ 'ಸ್ವಿಚ್ ಆನ್' ಮಾಡಬೇಕಂತೆ" ಎಂದರು. ಆಕೆ "ಓಹೋ ಹೌದಾ. ಏನು ಮಾಡುತ್ತದೆ ಈ ಯಂತ್ರ?" ಎಂದು ನನ್ನನ್ನು ಕೇಳುತ್ತಾ ಸ್ವಿಚ್ ಆನ್ ಮಾಡಿದರು. ನಾನು ನನ್ನ ವಿವರಣೆಕೊಟ್ಟೆ. ಅದರಿಂದ ಸಾರಾಭಾಯಿ ಹಾಗೂ ಕಲಾಂ ಅವರಿಗಾದ ಸಂತೋಷ ಅವರ್ಣನೀಯ. ನಿಜಕ್ಕೂ ಕಲಾಂರೊಂದಿಗೆ ಕೆಲಸ ಮಾಡಿದ ನಾವೆಲ್ಲ ಮೇಧಾವಿಗಳೇನಾಗಿರಲಿಲ್ಲ. ಆದರೆ ಅವರು ಯಾವ ರೀತಿ ನಮ್ಮಂತಹ ಕಿರಿಯರಿಗೆ ವೃತ್ತಿಪರವಾಗಿ ಉತ್ತೇಜನಕೊಟ್ಟು ನಮ್ಮನ್ನು ಹೇಗೆ ಮೇಲಕ್ಕೆ ತರುತ್ತಿದ್ದರು ಎಂಬುದಕ್ಕೆ ಉದಾಹರಣೆಯಾಗಿ ಇದನ್ನು ಹೇಳುತ್ತಿದ್ದೇನೆ.

ಕಲಾಂ ಅವರ ಇನ್ನೊಂದು ವ್ಯಕ್ತಿತ್ವವೆಂದರೆ, ನಮಗೆ ದಕ್ಕದ ತಾಂತ್ರಿಕತೆಗಳನ್ನು ನಿರಂತರ ಪ್ರಯೋಗ ನಡೆಸಿ ಕಲಿತುಕೊಳ್ಳುವುದು. ಅದರಲ್ಲಿ ಅವರೊಂದಿಗಿದ್ದ ನಾವೆಲ್ಲ ಬಹಳವಾಗಿ ಪಳಗಿದ್ದೇವೆ. ವಿನ್ಯಾಸ ಮಾಡುವುದಾಗಲಿ, ಮೂಲಮಾದರಿ (ಪ್ರೋಟೋಟೈಪ್)ಗಳ ತಯಾರಿಯೇ ಆಗಿರಲಿ, ಅವರು ನಮಗೆ ಪೂರ್ಣ ಪ್ರೋತ್ಸಾಹ-ಸಹಕಾರ ನೀಡುತ್ತಿದ್ದರು. ಇದರಿಂದಾಗಿ ಸಾರಾಭಾಯಿ ಅವರು ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ತುಂಬಾಗೆ ಬಂದಾಗ ಅವರು ಮೊದಲು ಬರುತ್ತಿದ್ದುದು ನಮ್ಮ ವಿಭಾಗಕ್ಕೆ! ಬಂದು ಕೇಳುವರು, 'ಕಲಾಂ, ಈ ಬಾರಿ ನನಗೆ ಯಾವ ಪ್ರಯೋಗ ತೋರಿಸುತ್ತಿದ್ದೀರಿ....?' ಅಂತ. 'ಸರ್, ನಾವು ಇದನ್ನು ರೆಡಿ ಮಾಡಿದ್ದೀವಿ, ನೋಡಿ' ಎಂದು ಕಲಾಂ ನಾವು ಯೋಜಿಸಿದ್ದ ಯಾವುದಾದರೂ ಪ್ರಯೋಗವನ್ನು ತೋರಿಸುತ್ತಿದ್ದರು. ಸಾರಾಭಾಯಿ ಅದನ್ನು ನೋಡಿ ಉತ್ಸಾಹಿತರಾಗುತ್ತಿದ್ದರು. ಈ ಪ್ರಯೋಗಗಳೆಲ್ಲ ನಡೆಯುತ್ತಿದ್ದದ್ದು ನಮ್ಮ ಆಫೀಸಿನ ಹಿಂದೆಯೇ ಹರಡಿದ್ದ ಸಮುದ್ರತೀರದ ಮರಳಿನ ಮೇಲೆಯೇ! ನಮ್ಮ ರಾಕೆಟ್‌ತಂತ್ರಜ್ಞಾನ ಬೆಳೆದದ್ದು ಹೀಗೆ. ಚಿಕ್ಕಚಿಕ್ಕ ಹಂತದಲ್ಲಿ ಹೊಸಹೊಸ ಪ್ರಗತಿಗಳನ್ನು ಕಾಣುತ್ತಾ ಯಾವ ಸೌಲಭ್ಯಗಳೂ ಇಲ್ಲದೆ ನೂರಾರು ಎಂಜಿನಿಯರುಗಳ ಸತತ ಶ್ರಮದಿಂದ ನಮ್ಮ ಭಾರತೀಯ ರಾಕೆಟ್ ತಂತ್ರಜ್ಞಾನ ವಿಶ್ವಮಟ್ಟಕ್ಕೆ ಬೆಳೆಯಿತು. ಆ ದಿನಗಳಲ್ಲಿ ಕಲಾಂ ಹಾಗೂ ಸಾರಾಭಾಯಿ ಅಂತಹವರ ನಾಯಕತ್ವವೇ ಇದಕ್ಕೆ ಮೂಲಕಾರಣವೆಂದರೆ ತಪ್ಪಾಗಲಾರದು.

ಸಾಭಾರ : ಉತ್ಥಾನ

ಸರ್ವೋದಯ ಆಂದೋಲನದ ಮುನ್ನಡೆ

ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲಾ ಮಟ್ಟದ ಸರ್ವೋದಯ ಮಂಡಲಿಗಳನ್ನು ಸ್ಥಾಪಿಸುವ ಯೋಜನೆಯ ಅಂಗವಾಗಿ ದಿನಾಂಕ ೨೧.೦೯.೨೦೧೫ರಂದು ಹಾಸನ ಜಿಲ್ಲಾ ಸರ್ವೋದಯ ಮಂಡಲಿಯ ರಚನೆಯಾಯಿತೆಂದು ತಿಳಿಸಲು ಸಂತೋಷವಾಗುತ್ತದೆ. ಆ ದಿನ ಪ್ರವಾಸಿ ಮಂದಿರದಲ್ಲಿ ನಡೆದ ಲೋಕಸೇವಕರ ಮತ್ತು ಸರ್ವೋದಯ ಮಿತ್ರರ ಸಭೆಯಲ್ಲಿ ಜಿಲ್ಲಾ ಸರ್ವೋದಯ ಮಂಡಲಿಯ ರಚನೆಯಾಯಿತು. ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸರ್ವೋದಯ ಮಂಡಲಿಯ ಅಧ್ಯಕ್ಷರಾದ ಸುರೇಂದ್ರ ಕೌಲಗಿಯವರು ವಹಿಸಿದ್ದರು. ಸರ್ವೋದಯ ಮಂಡಲಿಯ ಸದಸ್ಯರಾದ ಹೆಚ್.ಎಮ್.ಶಿವಣ್ಣರವರು ಸಭೆಯಲ್ಲಿ ಹಾಜರಿದ್ದರು. ಪ್ರಾರಂಭದಲ್ಲಿ ಸಭಾಧ್ಯಕ್ಷರು ಅಖಿಲ ಭಾರತ ಸರ್ವೋದಯ ಮಂಡಲಿ ರಚನೆಯ ಇತಿಹಾಸವನ್ನು ಸಭೆಗೆ ಪರಿಚಯಮಾಡಿಕೊಟ್ಟರು. ಜಿಲ್ಲಾ ಸರ್ವೋದಯ ಮಂಡಲಿಯ ರಚನೆಯ ಅಗತ್ಯವನ್ನು ಸಹ ತಿಳಿಸಿದರು. ನಂತರ ನಡೆದ ಕಾರ್ಯಕಲಾಪಗಳಲ್ಲಿ ಶ್ರೀ.ಮಂಜಪ್ಪ ಗೌಡರು, ಶ್ರೀ.ಸುರೇಶ್ ಗುರೂಜಿ, ಶ್ರೀ.ಹೆಚ್.ಸಿ.ಶಿವಣ್ಣ, ಶ್ರೀ.ಜ.ಹೋ.ನಾರಾಯಣಸ್ವಾಮಿ, ಭ್ರಮರಾಂಬ, ಸರೋಜಮ್ಮ, ಶ್ರೀ.ಡಿ.ಸುದರ್ಶನ್, ಶ್ರೀ.ಯೋಗೇಶಪ್ಪ, ಶ್ರೀ.ಶೇಷಶೆಟ್ಟಿ, ಶ್ರೀ.ಮಂಜುನಾಥ್ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದರು. ವಿಚಾರ ವಿನಿಮಯದ ನಂತರ ಶ್ರೀ.ಮಂಜಪ್ಪಗೌಡರು ಅಧ್ಯಕ್ಷರಾಗಿಯೂ, ಸುರೇಶ್ ಗುರೂಜಿರವರು ಖಜಾಂಚಿಯಾಗಿಯೂ, ಅನುಗನಾಡು ಕೃಷ್ಣಮೂರ್ತಿರವರು ಕಾರ್ಯದರ್ಶಿಯಾಗಿಯೂ ಆಯ್ಕೆಗೊಂಡರು. ನಂತರ ಮಾರನೇ ದಿನವೇ ೨೨ ರಂದು ಮಧ್ಯಾಹ್ನ ಸಮಿತಿಯ ಸಭೆನಡೆದು ಸಂಭಾವ್ಯ ಕಾರ್ಯಕ್ರಮಗಳ ಬಗ್ಗೆ ವಿಚಾರವಿನಿಮಯ ನಡೆಯಿತು.

***

ಉತ್ತರ ಪ್ರದೇಶ ರಾಜ್ಯದ ಸರ್ವೋದಯ ಮಂಡಲಿಯ ಸಮ್ಮೇಳನ ೬ ಆಗಸ್ಟ್ ೨೦೧೫ರಂದು ಚಿತ್ರಕೂಟದಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ರಾಜ್ಯ ಮಂಡಲಿಯ ಅಧ್ಯಕ್ಷರಾದ ಡಾ.ಮಧುಸೂದನ್ ಉಪಾಧ್ಯಾಯವಹಿಸಿದ್ದರು. ಸಮ್ಮೇಳನದಲ್ಲಿ ೧೭ ಜಿಲ್ಲೆಗಳಿಂದ ೫೧ ಲೋಕಸೇವಕರು ಮತ್ತು ಸರ್ವೋದಯ ಮಿತ್ರರು ಭಾಗವಹಿಸಿದ್ದರು. ಸಮ್ಮೇಳನದಲ್ಲಿ ದೇಶದ ವರ್ತಮಾನ ಸವಾಲುಗಳು ಮತ್ತು ನಮ್ಮ ಪಾತ್ರ ಈ ವಿಷಯವಾಗಿ ಚರ್ಚೆನಡೆಯಿತು. ಸಮ್ಮೇಳನದಲ್ಲಿ ಸರ್ವಸೇವಾ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ವಿಜಯ್ ಭಾಯಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಪ್ರದೇಶ ಸರ್ವೋದಯ ಮಂಡಲಿಯ ಅಧ್ಯಕ್ಷರನ್ನು ಆಯ್ಕೆಮಾಡಲಾಯಿತು. ಆಯ್ಕೆಯ ಪ್ರಕ್ರಿಯೆ ನಡೆಸಲು ಶ್ರೀಮತಿ.ಪುತುಲ ಕುಮಾರಿ ಅವರನ್ನು ಆಯ್ಕೆಮಾಡಲಾಯಿತು. ಉಪಸ್ಥಿತರಿದ್ದ ಎಲ್ಲ ಜಿಲ್ಲಾಧ್ಯಕ್ಷರಿಂದ ಹೆಸರನ್ನು ಕೋರಲಾಯಿತು. ರವೀಂದ್ರಭಾಯಿ ಪೂರ್ವ ಅಧ್ಯಕ್ಷರಾಗಿದ್ದ ಡಾ.ಮಧುಸೂದನ್ ಉಪಾಧ್ಯಾಯರ ಹೆಸರನ್ನು ಸೂಚಿಸಿದರು. ಅವರ ಹೆಸರನ್ನು ಜಿಲ್ಲಾಧ್ಯಕ್ಷರು ಸರತಿಯ ಪ್ರಕಾರ ಸಮರ್ಥಿಸಿದರು. ಉಪಾಧ್ಯಾಯರು ಅಧ್ಯಕ್ಷರಾದರು.

ಸನ್ಮಾನ್ಯರಿಂದ

'ನಗರೀಕರಣ ವಿರುದ್ಧ ಗ್ರಾಮೀಣೀಕರಣ' ಎಂಬ ಲೇಖನದಲ್ಲಿ (ಜನಪದ ವಿಚಾರ: ಸೆಪ್ಟೆಂಬರ್ ೨೦೧೫) 'ಗ್ರಾಮಗಳಲ್ಲಿನ ಯುವಕರು ಉದ್ಯೋಗ ಹುಡುಕುತ್ತ ನಗರಗಳಿಗೆ ಧಾವಿಸುತ್ತಿದ್ದಾರೆ' ಎಂದು ಬರೆದಿದ್ದೀರಿ. 'ಕೃಷಿ ಭೂಮಿ ಕಡಿಮೆಯಾಗುತ್ತಿರುವುದರ ಜೊತೆಗೆ ಕೃಷಿ ಕ್ಷೀಣವಾಗುತ್ತಿದೆ' ಎಂದು ಬರೆದಿದ್ದೀರಿ. ೧೯೫೦-೫೧ ರಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿ ೯೭.೩೨ ಮಿಲಿಯನ್ ಹೆಕ್ಟೇರಿದ್ದರೆ ೨೦೧೦-೧೧ರ ಹೊತ್ತಿಗೆ ಅದು ೧೨೫.೭೩ ಮಿಲಿಯನ್ ಹೆಕ್ಟೇರಿನಷ್ಟಿತ್ತು. ಹಾಗಾದರೆ ನೀವು ಯಾವ ಆಧಾರದ ಮೇಲೆ 'ಕೃಷಿ ಭೂಮಿ ಕಡಿಮೆಯಾಗುತ್ತಿದೆ' ಎಂದು ಹೇಳುತ್ತಿದ್ದೀರಿ? ಹಾಗೆಯೇ ೧೯೫೦-೫೧ರಲ್ಲಿ ನಾವು ೫೦.೮೨ ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆದಿದ್ದರೆ ೨೦೧೦-೧೧ರ ಹೊತ್ತಿಗೆ ನಾವು ೨೪೧.೫೭ ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆದಿದ್ದೇವೆ. ಜೊತೆಗೆ ೧೯೫೦-೫೧ರಲ್ಲಿ ಪ್ರತಿ ಹೆಕ್ಟೇರಿಗೆ ನಾವು ೫೨೨ಕಿಲೋ ಆಹಾರ ಧಾನ್ಯಗಳನ್ನು ಬೆಳೆಯುವುದು ಸಾಧ್ಯವಾಗಿದ್ದರೆ ೨೦೧೦-೧೧ರ ಹೊತ್ತಿಗೆ ಪ್ರತಿ ಹೆಕ್ಟೇರಿಗೆ ನಾವು ೧೯೨೧ ಕಿಲೋ ಬೆಳೆಯುತ್ತಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದಾಗ ೪೫ಕೋಟಿ ಜನರಿಗೆ ಆಹಾರ ಒದಗಿಸುವುದು ನಮಗೆ ಸಾಧ್ಯವಾಗಿರಲಿಲ್ಲ. ಆದರೆ ಇಂದು ನಾವು ೧೨೦ ಕೋಟಿ ಜನರಿಗೆ ಆಹಾರ ಒದಗಿಸುತ್ತಿದ್ದೇವೆ. ಪರಿಣಾಮವಾಗಿ ಹಿಂದೆ ಆಹಾರ ಧಾನ್ಯಗಳನ್ನು ಆಯಾತ ಮಾಡಬೇಕಾಗಿದ್ದ ನಾವು ಇಂದು ನಿರ್ಯಾತ ಮಾಡುವಷ್ಟು ಬೆಳೆಯುತ್ತಿದ್ದೇವೆ. ೨೦೧೩ರಲ್ಲಿ ನಾವು ೩೯ ಬಿಲಿಯನ್ ಡಾಲರ್ ಬೆಲೆಯ ವ್ಯವಸಾಯ ಉತ್ಪಾದನೆಗಳನ್ನು ನಿರ್ಯಾತ ಮಾಡಿದ್ದೇವೆ. ನೀವು ಹೇಳುವಂತೆ ಕೃಷಿ ಕ್ಷೀಣವಾಗಿದ್ದರೆ ಇದು ಸಾಧ್ಯವಾಗುತ್ತಿತ್ತೇ?

ನಮ್ಮ ದೇಶದಲ್ಲಿ ವ್ಯವಸಾಯದಲ್ಲಿ ಆವಶ್ಯಕತೆಗಿಂತ ಅತಿ ಹೆಚ್ಚು ಜನ ತೊಡಗಿದ್ದಾರೆ. ಇಂದಿಗೂ ಪ್ರತಿಶತ ೫೮ರಷ್ಟು ಜನ ವ್ಯವಸಾಯವನ್ನವಲಂಬಿಸಿದ್ದಾರೆ. ಆದುದರಿಂದ ವ್ಯವಸಾಯದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಅಸಂಪೂರ್ಣೋದ್ಯೋಗ (Underemployment) ಇದೆ. ಉದಾಹರಣೆಗೆ ಇಂಗ್ಲೆಂಡಿನಲ್ಲಿ ಒಟ್ಟು ಭೂಮಿಯ ಪ್ರತಿಶತ ೭೧ರಷ್ಟು ಭೂಮಿಯನ್ನು ವ್ಯವಸಾಯಕ್ಕೆ ಬಳಸಲಾಗುತ್ತದೆ, ಅದರಲ್ಲಿಯ ಪ್ರತಿಶತ ೩೯ರಷ್ಟು ಭೂಮಿಯನ್ನು ಮಾತ್ರ ಕೃಷಿಗಾಗಿ ಬಳಸಲಾಗುತ್ತದೆ. ಈ ಕ್ಷೇತ್ರದಲ್ಲಿ ಇಂಗ್ಲೆಂಡಿನ ಒಟ್ಟು ಕೆಲಸಗಾರರಲ್ಲಿ ಬರಿ ಪ್ರತಿಶತ ೧.೫ರಷ್ಟು ಮಾತ್ರ ಜನ ಕೆಲಸ ಮಾಡುತ್ತಾರೆ. ಅಂದರೆ ನಮ್ಮ ದೇಶದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಎಷ್ಟೊಂದು ಅಸಂಪೂರ್ಣೋದ್ಯೋಗ ಇದೆ ಎನ್ನುವುದು ಗೊತ್ತಾಗುತ್ತದೆ.

೨೦೧೦-೧೧ರಲ್ಲಿ ಕರ್ನಾಟಕದಲ್ಲಿ ೫೯೮೭೦೦೦ ವ್ಯವಸಾಯ ಹಿಡುವಳಿಗಳು ತಲಾ ಸರಾಸರಿ ಒಂದು ಹೆಕ್ಟೇರಿಗಿಂತ ಕಡಿಮೆ ಭೂಮಿಯನ್ನು ಹೊಂದಿದ್ದವು. ಕರ್ನಾಟಕ ಸರಕಾರದ ಪ್ರಕಾರ ಆರ್ಥಿಕವಾಗಿ ಪ್ರಯೋಜನಕಾರಿಯಾಗಬೇಕಾದರೆ ಒಂದು ಹಿಡುವಳಿ

ಕನಿಷ್ಟ ೨.೫ ಹೆಕ್ಟೇರಿನಷ್ಟಿರಬೇಕು. ಅಂದರೆ ಈ ಹಿಡುವಳಿದಾರರಲ್ಲಿ ಕನಿಷ್ಟ ಅರ್ಧದಷ್ಟು ಹಿಡುವಳಿದಾರರನ್ನು ನಾವು ವ್ಯವಸಾಯದಿಂದ ಹೊರಗೆ ತಂದು, ಅವರ ಹಿಡುವಳಿಗಳನ್ನು ಮಿಕ್ಕುಳಿದವರ ಹಿಡುವಳಿಗಳ ಜೊತೆಗೆ ಸೇರಿಸಿದರೆ ಆಗ ಈ ಎಲ್ಲ ಹಿಡುವಳಿಗಳೂ ಆರ್ಥಿಕವಾಗಿ ಪ್ರಯೋಜನಕಾರಿಯಾಗಬಹುದು. ಅಂದರೆ ಕರ್ನಾಟಕದಲ್ಲಿ ಕನಿಷ್ಟ ೩೦ರಿಂದ ೩೫ಲಕ್ಷ ರೈತರನ್ನು ವ್ಯವಸಾಯದಿಂದ ಹೊರಗೆ ಬರುವಂತೆ ಮಾಡಬೇಕಲ್ಲವೇ? ಹೀಗೆ ಮಾಡದೇ ಹೋದರೆ ಆರ್ಥಿಕವಾಗಿ ಪ್ರಯೋಜನಕಾರಿಯಾಗದ ಹಿಡುವಳಿಗಳನ್ನಿಟ್ಟುಕೊಂಡು ರೈತರು ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕಾದೀತು ಅಲ್ಲವೇ?

ಆದುದರಿಂದ ವ್ಯವಸಾಯದಲ್ಲಿ ತೊಡಗಿರುವ ಜನರನ್ನು ಅಲ್ಲಿಂದ ಹೊರತೆಗೆದು ಕೈಗಾರಿಕೆಗಳಲ್ಲಿ, ಸೇವಾ ಕ್ಷೇತ್ರಗಳಲ್ಲಿ ತೊಡಗಿಸುವುದು ಬುದ್ಧಿವಂತಿಕೆಯಲ್ಲವೇ? ಯಾಕೆಂದರೆ ವ್ಯವಸಾಯ ಕ್ಷೇತ್ರ ಒಟ್ಟು ದೇಶೀಯ ಉತ್ಪನ್ನದ (GDP) ಬರಿ ಪ್ರತಿಶತ ೧೪ರಷ್ಟು ಮಾತ್ರ ಒದಗಿಸುತ್ತದೆ. ಕೈಗಾರಿಕೆಗಳು ಪ್ರತಿಶತ ೨೬ ಮತ್ತು ಸೇವಾ ಕ್ಷೇತ್ರ ಪ್ರತಿಶತ ೫೫ ರಷ್ಟು ಒದಗಿಸುತ್ತದೆ. ಆದುದರಿಂದ ಜನರನ್ನು ವ್ಯವಸಾಯದಲ್ಲಿಯೇ ತೊಡಗಿಸುವುದು ಅವರ ದುಡಿಮೆಯ ಶಕ್ತಿಯನ್ನು ಅಪವ್ಯಯ ಮಾಡಿದಂತಲ್ಲವೇ? ಈ ಹಿನ್ನೆಲೆಯಲ್ಲಿಯೇ ವ್ಯವಸಾಯ ಭೂಮಿಯನ್ನು ಕೈಗಾರಿಕೆಗಳ ಅಭಿವೃದ್ಧಿಗಾಗಿ ಬಳಸದೇ ಇದ್ದರೆ ಅದು ಆತ್ಯಂತಿಕವಾಗಿ ಸ್ವವೈಫಲ್ಯಕಾರಿಯಾಗಿರುತ್ತದೆ ಎನ್ನುತ್ತಾರೆ ನೋಬೆಲ್ ವಿಜೇತ ಅಮರ್ತ್ಯ ಸೇನ್. ಆದುದರಿಂದ ಗ್ರಾಮೀಣ ಜನತೆ ಗ್ರಾಮಮುಖಿಯಾಗಿರಬೇಕು, ನಗರಮುಖಿಯಾಗಬಾರದು ಎನ್ನುವುದು ದೇಶದ ಅಭಿವೃದ್ಧಿಗೆ ಮಾರಕವಲ್ಲವೇ? ಇಂಥ ಪರಿಸ್ಥಿತಿಯಲ್ಲಿ ಗ್ರಾಮಗಳನ್ನು ನಗರಗಳ ವಿರುದ್ಧ ಎತ್ತಿ ಕಟ್ಟುವುದು ಸಾಧುವೇ?

ಬಾಪು ಹೆದ್ದೂರಶೆಟ್ಟಿ ಬೆಂಗಳೂರು

೨೫-೯-೨೦೧೫

ದುಃಖ

ಗಾಂಧೀವಿಚಾರ ಚಿಂತಕ, ನಾಸ್ತಿಕ ಸಂಘದ ಅಧ್ಯಕ್ಷರಾಗಿದ್ದ ಲವಣಂ ಕಳೆದ ೧೪ ಆಗಸ್ಟ್ ೨೦೧೫ರಂದು ವಿಜಯವಾಡದಲ್ಲಿರುವ ನಾಸ್ತಿಕ ಕೇಂದ್ರದಲ್ಲಿ ತಮ್ಮ ೮೫ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ ತಂದೆ ರಾಮಚಂದ್ರ ಗೋರ ಕೂಡ ನಾಸ್ತಿಕರಾಗಿದ್ದರು. ಮಹಾತ್ಮ ಗಾಂಧೀಜಿಯವರ ಪ್ರೀತಿಗೆ ಪಾತ್ರರಾಗಿದ್ದರು. ಲವಣಂ ವಿನೋಬಾಭಾವೆಯವರ ಭೂದಾನ ಯಾತ್ರೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದರು. ಭಾರತ–ಪೀಕಿಂಗ್ ಶಾಂತಿಯಾತ್ರೆಯಲ್ಲಿ ಮತ್ತು ಚಂಬಲ್ ಕಣಿವೆಯ ಡಕಾಯಿತರ ಆತ್ಮಸಮರ್ಪಣೆ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದರು. ಹೇಮಲತಾ ಎಂಬ ದಲಿತ ಕನ್ಯೆಯನ್ನು ವಿವಾಹವಾಗಿದ್ದರು. ನಾಸ್ತಿಕವಾದ ಮತ್ತು ಮಾನವತಾವಾದಗಳ ಸಂಗಮವಾಗಿದ್ದರು. ವಿದೇಶಗಳಲ್ಲಿ ಉಪನ್ಯಾಸ ಮಾಡಿದ್ದರು. ಲವಣಂ ಅವರ ನಿಧನಕ್ಕೆ ಜನಪದ ವಿಚಾರ ದುಃಖಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.
ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ನರೇಂದ್ರ, ಶ್ರೀ.ರಾಘವೇಂದ್ರ.ವಿ, ಎ.ಸಿಂಧು,
ಆರ್.ಕೆ.ಕೃಪಾ, ಆರ್.ಪವಿತ್ರ, ಎಸ್.ವನಿತಾ, ವಿ.ದೀಪಿಕಾ
–ಬೆಂಗಳೂರು

ಶ್ರೀ.ಹೊ.ನಾರಾಯಣಸ್ವಾಮಿ, ಶ್ರೀ.ಹೆಚ್.ಎಸ್.ಪ್ರಕಾಶ್,
ಶ್ರೀರೂಪರಾಜ್ ಚಂದ್ರು,
ವ್ಯವಸ್ಥಾಪಕರು, ಸಂಜೀವಿನಿ ಕೋ ಆಪರೇಟಿವ್ ಆಸ್ಪತ್ರೆ – ಹಾಸನ
ಜೆ.ಎಮ್.ಮಂಜುಳ – ಮಂಡ್ಯ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237